
ಜನಪ್ರಗತಿ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ–೫ ಮಾರ್ಚ್–೨೦೦೫ ಸಂಚಿಕೆ–೮



ವೈಜ್ಞಾನಿಕತೆ + ವೈಚಾರಿಕತೆ =ಐನ್‌ಸ್ಟೈನ್

೧. ವೈಜ್ಞಾನಿಕತೆ + ವೈಚಾರಿಕತೆ = ಐನ್‌ಸ್ಟೈನ್.

-ಸುರೇಂದ್ರ ಕೌಲಗಿ.

೨೦೦೫ನೇ ಇಸವಿಯನ್ನು ವಿಶ್ವ ಭೌತವಿಜ್ಞಾನ ವರ್ಷವೆಂದು ಆಚರಿಸಲಾಗುತ್ತಿದೆ. ಭಾರತದಲ್ಲಿಯೂ ಭೌತವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್‌ರ ಸ್ಮರಣೆಯಲ್ಲಿ ವಿದ್ಯಾರ್ಥಿ ಮತ್ತು ಯುವಕರಲ್ಲಿ ಮೂಲವಿಜ್ಞಾನದ ಪರಿಚಯವನ್ನು ಮಾಡಿಕೊಡುವ ಕಾರ್ಯಕ್ರಮವನ್ನು ನಡೆಸಲಾಗುವುದು. ಈ ಸಂದರ್ಭದಲ್ಲಿ ಐನ್‌ಸ್ಟೈನ್‌ರ ವಿಚಾರಗಳ ಪ್ರಸ್ತುತತೆಯನ್ನು ಕುರಿತು ಈ ಲೇಖನದಲ್ಲಿ ವಿಚಾರಗಲನ್ನು ಮಂಡಿಸಲಾಗಿದೆ.

೨. ಪೇಟೆಂಟ್ ಉರುಳಿನೊಳಗೂ ಇದೆ ಒಂದವಕಾಶ; ಮಲೇಷಿಯಾದ ಮಾದರಿ.

– ಶಾರದಾ ಗೋಪಾಲ

ಈಗ ಭಾರತದಲ್ಲಿ ತೀವ್ರವಾಗಿ ಚರ್ಚೆಗೆ ಒಳಗಾಗಿರುವ ವಿಷಯ ಬೌದ್ಧಿಕ ಆಸ್ತಿ ಹಕ್ಕಿಗೆ ಸಂಬಂಧಿಸಿದ್ದು. ಈ ಜ್ವಲಂತ ಸಮಸ್ಯೆಯ ಬಗ್ಗೆ ಅರಿವನ್ನು ಮೂಡಿಸುವ ಪ್ರಯತ್ನ ಈ ಲೇಖನದಲ್ಲಿ ಸುಬದ್ಧವಾಗಿ ನಡೆದಿದೆ.

೩. ಹಿಂಸೆ ಮತ್ತು ಪ್ರಜಾಪ್ರಭುತ್ವ

-ಜೆ. ಆರ್. ಡಿ. ಟಾಟಾ.

ಪ್ರಚಲಿತವಿರುವ ಯಾವುದೆ ಗಂಭೀರವಾದ ವಿಷಯದ ಬಗ್ಗೆ ರಾಜಕಾರಣಿಗಳು ತಮ್ಮ ಅಭಿಪ್ರಾಯ ಕೊಡುವುದು ಸಾಮಾನ್ಯ. ಆದರೆ ಜನ ಆ ಅಭಿಪ್ರಾಯಗಳನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಆದರೆ ಅವೇ ವಿಷಯಕ್ಕೆ ಸಂಬಂಧಿಸಿದ ಅಭಿಪ್ರಾಯಗಳು ಉದ್ಯಮಪತಿ ಮತ್ತು ತಂತ್ರಜ್ಞಾನಿಗಳಿಂದ ಪ್ರಕಟಗೊಂಡಾಗ ಅವು ಜನರ ಗಮನ ಸೆಳೆಯುತ್ತವೆ. ಅಂಥ ಒಂದು ಸಾರ್ವಜನಿಕ ವಿಷಯ ಕುರಿತ ಖ್ಯಾತ ಉದ್ಯಮಿಯೊಬ್ಬರ ಅಭಿಪ್ರಾಯ ಈ ಲೇಖನದಲ್ಲಿದೆ.

೪. A.K. ಬಂದೂಕಿನ ಆತ್ಮರೋದನ.

– ಜಗನ್ನಾಥ .ಅ. ಸಣ್ಣೂರ.

ಇಂದು ಹಿಂಸೆ ನಡೆಯುವಲ್ಲೆಲ್ಲಾ ಎ.ಕೆ.೪೭ ಎಂಬ ಹೆಸರಿನ ಕೋವಿ ಹಾಜರಿರುತ್ತದೆ. ಅದರ ಶೋಧನೆಯಾದಂದಿನಿಂದ ಅದು ಹತ್ಯೆ ಮಾಡಿದ ಜನರ ಲೆಕ್ಕ ಅಗಣಿತ. ಅಂಥ ಕೋವಿಯ ಆತ್ಮರೋದನ ಈ ಲೇಖನದಲ್ಲಿ ಅಭಿವ್ಯಕ್ತಗೊಂಡಿದೆ.

೫. ಥಾಮಸ್ ಅಲ್ವ ಎಡಿಸನ್

–ಆರ್.ವಿ.ಕುಮಾರ್(ಮೂಲ)

ವಿಜ್ಞನ ಲೋಕದ ಶ್ರೇಷ್ಠತಮ ಸಂಶೋಧಕ ಥಾಮಸ್ ಅಲ್ವ ಎಡಿಸನ್ ನೆನಪಿಗೆ ಈ ಲೇಖನ

೬. ಪುರಸೊತ್ತಿನ ಹವ್ಯಾಸಗಳು.

–ಎ. ಕೃಷ್ಣ ಮೂರ್ತಿ.

ಇದೊಂದು ಲಲಿತ ಪ್ರಬಂಧ. ಇದರಲ್ಲಿ ಅನೇಕ ವಿನೋದಪೂರ್ಣ ಸಂಗತಿಗಳಿವೆ. ಓದಿ ಆನಂದಿಸಬಹುದಾದ ಹರಟೆ ಇದಾಗಿದೆ.

೭.ದಿಟದ ಸಂಶೋಧಕ ಡಾ॥ ಎಸ್. ಶ್ರೀಕಂಠ ಶಾಸ್ತ್ರಿ.

–ಡಾ॥ ಎಚ್. ಎಸ್. ಗೋಪಾಲ ರಾವ್.

ವಿಶ್ವದಲ್ಲಿ ಅನೇಕ ಸಂಶೋಧಕರು ಇದ್ದರು ಮತ್ತು ಇದ್ದಾರೆ; ಮುಂದೆಯೂ ಇರುತ್ತಾರೆ. ಆದರೆ ಕೆಲವು ಸಂಶೋಧಕರು'ಭುವನದ ಭಾಗ್ಯ' ಎಂಬಂತೆ ಕಾಣುತ್ತಾರೆ. ಅಂತಹ ಅಪರೂಪದ ಸಂಶೋಧಕರಲ್ಲಿ ಡಾ॥ ಎಸ್. ಶ್ರೀಕಂಠ ಶಾಸ್ತ್ರಿ ಒಬ್ಬರು. ಅವರನ್ನು ಕುರಿತಾದ ಲೇಖನವಿದು.

೮.ಧರ್ಮ ಮತ್ತು ಪ್ರಜಾಪ್ರಭುತ್ವ

–ಶ್ರೀ ಶಿವಮೂರ್ತಿ ಶರಣರು.

ಧರ್ಮನಿರಪೇಕ್ಷವಾದ ಸಮಾಜದ ಕಲ್ಪನೆಯಲ್ಲಿ 'ಕರ್ಮಠತನ'ವಾಗದ, ಸಮಕಾಲೀನ ಧರ್ಮದ ಬಗ್ಗೆ ಚಿಂತನಾಶೀಲ ಲೇಖನ ಇಲ್ಲಿ ಸಾದರಗೊಳಿಸಲ್ಪಟ್ಟಿದೆ.

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಮಾರ್ಚ್-೨೦೦೫
ಸಂಪುಟ ೫
ಸಂಚಿಕೆ ೮

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
**ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ**

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

(08236)298754
e-mail - janapada@yahoo.com
www.janapada.org

ಓಂ ಪ್ರಾರ್ಥನಾ ಗೀತ

ವೇದ ಪುರಾಣವು
ಬಾಯ್ಬಲ್ ಕುರಾಣವು
ಆಗವಾವೆಸ್ತಾ- ಓಂಕಾರಾ
ನಂಬಿಗೆಗಿಂಬಾದ ರ್ಹ್ರೀಂಕಾರಾ
ಇದು ತತ್‌ಪುರುಷನ ಓಂಕಾರಾ
ಇದು ಸತ್‌ಪುರುಷನ ಓಂಕಾರಾ
ಅವರವರಿಗೆ ಅವರಾಕಾರಾ

ಸ್ವರ ವ್ಯಂಜನಗಳ ವರ್ಣವಿಕಾರಾ
ಛಂದೋನಿರ್ಮಿತ ಪ್ರಾಕಾರಾ
ಚಿತ್ರದ ಭಿತ್ತಿಗೆ ಸಂಸ್ಕಾರಾ
ಪರಾ ಪ್ರಕೃತಿಗಿದೆ ಅಧಿಕಾರಾ
ಸಹೃದಯು ರಸಿಕನ ಉದ್ಗಾರಾ
ಓಂಕಾರವೆ ಶ್ರುತ್ಯಾಕಾರಾ
ಭಾವ ಸ್ಫೂರ್ತಿಗೆ ಇದು ದಿವ್ಯ ಧ್ವನಿ
ಜೀವ ಸಾಹಿತ್ಯಕೆ ಇದು ಸವಿ, ಇದು ಸನಿ

ಓಂಕಾರಾ
ಇದು ರ್ಹ್ರೀಂಕಾರಾ
ಓಂ! ಸ್ವಸ್ತಿ! ಅಮೆನ್ ಓಂ...

– ಅಂಬಿಕಾತನಯದತ್ತ

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರೇ ಹೊಣೆ

(-ಸಂಪಾದಕರು)

ವಿಚಾರ ದೀಪ್ತಿ

ನರ ಇರುವ ತನಕ ಸಮರ ಇದ್ದೇ ಇರುವುದು. ಸುದೀರ್ಘಕಾಲ ಪರ್ಯಂತ ಪರಮಾಣು ಶಕ್ತಿ ಮನುಕುಲಕ್ಕೆ ವರದಾನವಾಗುವ ಸಾಧ್ಯತೆಯನ್ನು ಮುಂಗಾಣಲಾರೆ. ಆದ್ದರಿಂದ ಸಧ್ಯಕ್ಕೆ ಇದೊಂದು ಪಿಡುಗೆಂದೇ ಹೇಳಬೇಕು. ಪ್ರಾಯಶಃ ಹೀಗಿರುವುದೇ ಲೇಸು. ಮಾನವ ಜನಾಂಗ ತನ್ನ ಅಂತಾರಾಷ್ಟ್ರೀಯ ಕಾರ್ಯಕಲಾಪಗಳಿಗೆ ಒಂದು ವ್ಯವಸ್ಥೆ ಆವಾಹಿಸುವುದನ್ನು ಇದು ಒತ್ತಾಯಿಸಬಹುದು. ಭಯದ ಒತ್ತಡವಿರದಿದ್ದರೆ ಇದು ಸಾಧ್ಯವಾಗಲಾರದು. ಯುದ್ಧ ಗೆದ್ದಾಯಿತು. ಆದರೆ ಶಾಂತಿಯನ್ನಲ್ಲ. ಸಂಸ್ಕೃತಿಯ ಮೌಲ್ಯಗಳನ್ನು ಪೋಷಿಸುವಾತ ಶಾಂತಿವಾದಿ ಆಗದಿರಲಾರ. ನಮ್ಮ ನಿಯಂತ್ರಣಕ್ಕೆ ಅಧೀನವಾಗಿರದ ಬಲಗಳಿಂದ ಪ್ರತಿಯೊಂದು ನಿರ್ಧಾರಿತವಾಗಿದೆ. ನಾವೆಲ್ಲರೂ ಅಗೋಚರ ವೇಣುವಾದಕನೊಬ್ಬ ಅಸ್ಪಷ್ಟ ಪ್ರಾಚೀನದಲ್ಲಿ ನಾದ ಗರ್ಭಿಸಿದ ಗಾನಕ್ಕೆ ನರ್ತಿಸುತ್ತಿದ್ದೇವೆ. ಮನಃಸ್ಸಾಕ್ಷಿನಿಷ್ಠ ಆಕ್ಷೇಪಣಾಕಾರನೆ ಕ್ರಾಂತಿಕಾರಿ. ಕಾನೂನಿನ ಉಲ್ಲಂಘನೆ ನಿರ್ಧರಿಸುವಲ್ಲಿ ಆತ ತನ್ನ ವೈಯುಕ್ತಿಕ ಆಸಕ್ತಿಗಳನ್ನು ಸಮಾಜದ ಒಳಿತಿಗಾಗಿ ಕ್ರಿಯಾಶೀಲವಾಗುವ ಅತ್ಯಂತ ಮಹತ್ವಪೂರ್ಣ ಧ್ಯೇಯಕ್ಕೋಸ್ಕರ ತ್ಯಾಗ ಮಾಡಿರುತ್ತಾನೆ. ಕುದುರೆಯನ್ನು ಪ್ರೀತಿಸುವ ತೆರದಲ್ಲಿ ನೀವು ಕಾರನ್ನು ಪ್ರೀತಿಸಲಾರಿರಿ. ಯಂತ್ರಗಳಿಗೆ ಸಾಧ್ಯವಾಗದ ರೀತಿಯಲ್ಲಿ ಕುದುರೆ ಮಾನವ ಸಂವೇದನೆಯನ್ನು ಪ್ರದರ್ಶಿಸುತ್ತದೆ. ಯಂತ್ರಗಳು ನಮ್ಮ ಬದುಕನ್ನುವ್ಯಕ್ತಿ ಸಂಬಂಧ ರಿಕ್ತವಾಗಿಸಿ, ನಮ್ಮಲ್ಲಿಯ ಕೆಲ ಮೂಲ ಭಾವನೆಗಳನ್ನು ಮೊಟಕಿಸಿ ವ್ಯಕ್ತಿಶೂನ್ಯ ಪರಿಸರವನ್ನು ಸೃಷ್ಟಿಸುತ್ತವೆ.

–ಆಲ್ಬರ್ಟ್ ಐನ್‌ಸ್ಟೈನ್.

ವೈಜ್ಞಾನಿಕತೆ + ವೈಚಾರಿಕತೆ = ಐನ್‌ಸ್ಟೈನ್

–ಸುರೇಂದ್ರ ಕೌಲಗಿ.

ಮರದ ಹಲಗೆಯನ್ನು ತೆಗೆದುಕೊಂಡು ಆ ಹಲಗೆಯ ತೆಳುವಾದ ಪ್ರದೇಶವನ್ನು ಹುಡುಕಿ ಅಲ್ಲಿ ಅಸಂಖ್ಯಾತ ರಂಧ್ರಗಳನ್ನು ಮಾಡುವಂಥ ವಿಜ್ಞಾನಿಗಳ ಬಗ್ಗೆ ನನಗೆ ಸಹನೆ ಇಲ್ಲ.

–ಆಲ್ಬರ್ಟ್ ಐನ್ ಸ್ಟೈನ್.

ವಿಶ್ವದ ವಿಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ ತಮ್ಮ ಅವಿಶ್ರಾಂತ ದುಡಿಮೆಯ ಫಲವಾಗಿ ಸಂಶೋಧಿಸಿದ ಸಾಪೇಕ್ಷ ಸಿದ್ಧಾಂತವನ್ನು ಕುರಿತು ಪ್ರಥಮ ಬಾರಿಗೆ ೧೯೦೫ ರಲ್ಲಿ ಒಂದು ಪ್ರಬಂಧದ ಮೂಲಕ ಬಹಿರಂಗಗೊಳಿಸಿದರು. ಈ ಘಟನೆ ವಿಶ್ವದ ವೈಜ್ಞಾನಿಕ ಬೆಳವಣಿಗೆಯಲ್ಲಿ ಐತಿಹಾಸಿಕ ಘಟನೆಯಾಯಿತು. ಈ ಮಹತ್ವದ ಘಟನೆ ನಡೆದು ಇಲ್ಲಿಗೆ ೧೦೦ ವರ್ಷಗಳಾದವು. ಈ ನಿಮಿತ್ತ ಜನಸಾಮಾನ್ಯರಲ್ಲಿ ವಿಶೇಷವಾಗಿ ವಿದ್ಯಾರ್ಥಿಗಳಲ್ಲಿ ಮತ್ತು ಯುವಕರಲ್ಲಿ ವೈಜ್ಞಾನಿಕ ದೃಷ್ಟಿಯನ್ನು ಮೂಡಿಸುವ ದೃಷ್ಟಿಯಿಂದ ೨೦೦೫ನೇ ಇಸವಿಯನ್ನು ವಿಜ್ಞಾನ ವರ್ಷವೆಂದು ಆಚರಿಸಲು ತೀರ್ಮಾನಿಸಲಾಗಿದೆ. ವಿಜ್ಞಾನಿ ಐನ್‌ಸ್ಟೈನ್‌ರವರನ್ನು ಸ್ಮರಿಸಿಕೊಳ್ಳುವ ಕಾರ್ಯಕ್ರಮ ದೇಶದಾದ್ಯಂತ ಒಂದು ವರ್ಷ ಪೂರ್ತಿ ನಡೆಯಲಿರುವುದು ಸಂತಸದ ವಿಷಯವಾಗಿದೆ. ಮಾನವನ ಜೀವನದ ಮೇಲೆ, ಚಿಂತನೆಯ ಮೇಲೆ ಪ್ರಭಾವ ಬೀರಿರುವ ದಾರ್ಶನಿಕರನ್ನು, ಚಿಂತಕರನ್ನು, ವಿಜ್ಞಾನಿಗಳನ್ನು, ಗ್ರಂಥಗಳನ್ನು ಸ್ಮರಿಸುವ ಅವಕಾಶ ಕಲ್ಪಿಸಿಕೊಳ್ಳುವುದು ಮಾನವನ ಗುಣಧರ್ಮವಾಗಿದೆ. ಈ ಗುಣದಿಂದಾಗಿ, ಸ್ವಭಾವದಿಂದಾಗಿ ಮನುಷ್ಯ ತನ್ನ ಬಾಳಿನಲ್ಲಿ ಬೆಳಕನ್ನು ಕಾಣುತ್ತಾ ಬಂದಿದ್ದಾನೆ; ತನ್ನ ಬಾಳಿಗೊಂದು ನಂಬಿಕೆಯನ್ನು ಪಡೆಯುತ್ತಾ ಬಂದಿದ್ದಾನೆ. ತನ್ನ ವಿಚಾರ ಶಕ್ತಿಯನ್ನು ಬೆಳೆಸಿಕೊಳ್ಳುತ್ತಾ ಬಂದಿದ್ದಾನೆ. ಆದ್ದರಿಂದ ಅವನು ಅನಾಗರಿಕತೆಯಿಂದ ನಾಗರಿಕತೆಯತ್ತ ಸಾಗುತ್ತ ಬಂದಿದ್ದಾನೆ. ಸ್ಮರಣೆಯ ಇಂಥ ಒಂದು ಸುವರ್ಣಾವಕಾಶ ಐನ್‌ಸ್ಟೈನ್‌ರ ಸಂಬಂಧವಾಗಿ ದೊರೆತಿರುವುದು ಸಂಭ್ರಮದ ಸಂಗತಿಯಾಗಿದೆ. ಆಲ್ಬರ್ಟ್ ಐನ್‌ಸ್ಟೈನ್‌ರು ವಿಶೇಷ ಪ್ರಕಾರದ ವಿಜ್ಞಾನಿಯಾಗಿದ್ದರು. ಅವರು ತಮ್ಮ ವೈಜ್ಞಾನಿಕ ಸಂಶೋಧನಾಸಕ್ತಿಯನ್ನು ಕೇವಲ ಭೌತಶಾಸ್ತ್ರಕ್ಕೆ ಸೀಮಿತಗೊಳಿಸಿಕೊಂಡಿರಲಿಲ್ಲ. ಈ ಭೌತ ಜಗತ್ತಿನ ಕೇಂದ್ರ ಬಿಂದುವಾದ ಮಾನವನ ಚರ್ಯೆ, ವಿಚಾರ, ಸ್ವಭಾವ, ಕ್ರಿಯೆ, ಭವಿಷ್ಯ ಇತ್ಯಾದಿಗಳ ಕ್ಷೇತ್ರಕ್ಕೂ, ಅವನು ರಚಿಸಿಕೊಂಡಿರುವ ಸರ್ಕಾರದ ವ್ಯವಸ್ಥೆಗೂ, ಧರ್ಮಗಳ ಆಚರಣೆಗೂ

ವಿಸ್ತರಿಸಿಕೊಂಡಿತ್ತೆಂಬ ಕಾರಣಕ್ಕಾಗಿ ಐನ್‌ಸ್ಟೈನ್ ವಿಶ್ವದ ವಿಖ್ಯಾತ ಜನಪ್ರಿಯ ವಿಜ್ಞಾನಿಯಾಗಿದ್ದಾರೆ. ಐನ್‌ಸ್ಟೈನ್‌ರ ಸಮಕಾಲೀನರಾಗಿ ವಿಶ್ವದಾದ್ಯಂತ ಅನೇಕ ವಿಜ್ಞಾನಿಗಳಿದ್ದರು. ಅವರಾರೂ ಐನ್‌ಸ್ಟೈನ್‌ರಷ್ಟು ಮಾನವಕುಲಕ್ಕೆ ಹತ್ತಿರವಾಗಿರಲಿಲ್ಲ. ಈ ಭೌತ ಜಗತ್ತಿನ ರಚನೆಯಲ್ಲಿ ಮಾನವನ ಪಾತ್ರ ಎಳ್ಳಷ್ಟೂ ಇಲ್ಲವಾದರೂ ಅವನು ಈ ಭೌತ ಜಗತ್ತಿನ ಸಾರ್ವಭೌಮನಾಗಿದ್ದಾನೆ. ಮಾನವನ ಮೇಲೆ ಭೌತ ಜಗತ್ತಿನ ಪರಿಣಾಮ ಎಷ್ಟು ಉಂಟಾಗುತ್ತದೋ ಅಷ್ಟೇ ಪ್ರಮಾಣದಲ್ಲಿ, ಅನೇಕ ಸಲ, ಅದಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಮಾನವನ ಕ್ರಿಯೆಯ ಪರಿಣಾಮ ಭೌತ ಜಗತ್ತಿನ ಮೇಲೆ ಉಂಟಾಗುತ್ತದೆ. ಮಾನವ ಮತ್ತು ಭೌತ ಜಗತ್ತು ಇವರಿಬ್ಬರ ಅವಿಭಾಜ್ಯ ಸಂಬಂಧವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದರು ಐನ್‌ಸ್ಟೈನ್. ಆದ್ದರಿಂದಲೆ ಅವರು ಏಕ ಕಾಲದಲ್ಲಿ ವಿಜ್ಞಾನಿಯಾಗುವುದರ ಜೊತೆಗೆ ದಾರ್ಶನಿಕರೂ ಆಗಿದ್ದರು. ಪ್ರಪಂಚ ಇದುವರೆಗೆ ಕಾಣದಿದ್ದ ಮಹಾನ್ ಶಾಂತಿವಾದಿಯಾದರು. ಇದಕ್ಕೂ ಮೊದಲು ಪ್ರಪಂಚ ಶಾಂತಿವಾದಿಗಳನ್ನು ಖಂಡಿತ ಕಂಡಿತ್ತು; ಕ್ರೈಸ್ತ, ಬುದ್ಧ, ಮಹಾವೀರ ಮುಂತಾದವರನ್ನು. ಆದರೆ ಇವರೆಲ್ಲ ಅಸಾಧಾರಣ ದೈವೀಶಕ್ತಿಯನ್ನು ಪಡೆದವರಾಗಿ ಬಂದ ಶಾಂತಿದೂತರು. ಆದರೆ ಐನ್‌ಸ್ಟೈನ್ ಎಲ್ಲರಂತೆ ಸಾಮಾನ್ಯ ಮಾನವನಾಗಿ ಹುಟ್ಟಿ, ಸಂಸಾರದ ಕಹಿ–ಸಿಹಿ ಅನುಭವಗಳನ್ನು ಉಂಡು ತನ್ನ ವಿಚಾರಶಕ್ತಿಯ ಬಲದಿಂದ ಭೌತ ಜಗತ್ತಿಗೆ ಸಂಬಂಧಿಸಿದ ವಿಜ್ಞಾನಿಯಾಗಿ ಮಾನವಕುಲದ ಬೆಳವಣಿಗೆಗೆ ಸಹಾಯಕನಾಗಿ, ತನ್ನ ಶೋಧನೆಯ ಪರಿಣಾಮವಾಗಿ "ಅಗೋಚರ ವೇಣುವಾದಕನೊಬ್ಬ ಅಸ್ಪಷ್ಟ ಪ್ರಾಚೀನದಲ್ಲಿ ನಾದ ಗರ್ಭಿಸಿದ ಗಾನಕ್ಕೆ ನರ್ತಿಸುತ್ತಿರುವ"" ಸುಂದರವಾದ ಭೌತ ಜಗತ್ತು ನಾಶವಾಗುವುದನ್ನು ನೋಡಿ, ಪಶ್ಚಾತ್ತಾಪದ ಬೆಂಕಿಯ ಬೇಗೆಯಲ್ಲಿ ಬೆಂದು ಹೊರಬಂದ ಮಾನವನಾಗಿ ಶಾಂತಿವಾದಿಯಾದರು ಐನ್‌ಸ್ಟೈನ್. ತಮ್ಮ ಸಾಪೇಕ್ಷ ಸಿದ್ಧಾಂತದ ಶೋಧನೆಯಿಂದಾಗಿ ಭೌತ ವಿಜ್ಞಾನವನ್ನು ಒಂದು ನೆಲೆಗಟ್ಟಿಗೆ ತಂದು ನಿಲ್ಲಿಸಿದರು. ಮುಂದೆ ಸಾಮಾನ್ಯ ಗುರುತ್ವ ಸಿದ್ಧಾಂತವನ್ನೂ ಮಂಡಿಸಿದರು. ಈ ಸಿದ್ಧಾಂತವು "ಅನೇಕ ರೀತಿಯಲ್ಲಿ ಕ್ಲಿಷ್ಟವಾಗಿದೆ. ಈವರೆಗೂ ಇದನ್ನು ವಿವರವಾಗಿ ಅರ್ಥಮಾಡಿಕೊಳ್ಳುವುದು ಸಾಧ್ಯವಾಗಿಲ್ಲ. ಅಲ್ಲದೆ ಸಮರ್ಥಿಸಲೂ ಸಾಧ್ಯವಾಗಿಲ್ಲ" ಎಂಬುದಾಗಿ ಅನೇಕರ ಅಭಿಮತವಾಗಿದೆ.(ಪ್ರೊ॥ ಕೆ. ಶ್ರೀನಿವಾಸನ್‌ರವರ ಪುಸ್ತಕ. ಪುಟ. ೧೩೧)

ಐನ್‌ಸ್ಟೈನ್‌ರವರು ಶೋಧಿಸಿದ ಭೌತಶಾಸ್ತ್ರದ ಸಿದ್ಧಾಂತಗಳು ವಿಜ್ಞಾನದ ವಿದ್ಯಾರ್ಥಿಗಳಿಗೆ ಕಬ್ಬಿಣದ ಕಡಲೆಯಾಗಿದ್ದರೂ ಅವರ ಶೋಧನೆಗಳು ಭೌತ ವಿಜ್ಞಾನವನ್ನು ಮುನ್ನಡೆಸಿಕೊಂಡುಬರಲು ಬಹುದೊಡ್ಡ ಕಾಣಿಕೆಯನ್ನು ಸಲ್ಲಿಸಿವೆ ಎಂಬುದರಲ್ಲಿ ಯಾವ ವಿವಾದವು ಇಲ್ಲ. ಬಹುತೇಕ ವಿಜ್ಞಾನಿಗಳು

ತಮ್ಮ ವಿಜ್ಞಾನ ಕ್ಷೇತ್ರದಂತೆಯೇ ಅರ್ಥವಾಗದ, ನೀರಸವಾದ ವ್ಯಕ್ತಿಗಳಾಗಿರುತ್ತಾರೆ. ಆದರೆ ಐನ್‌ಸ್ಟೈನ್ ತಮ್ಮೆಲ್ಲ ವೈಜ್ಞಾನಿಕನ ಗುಣಗಳೊಂದಿಗೆ ಮಾನವೀಯ ಗುಣಗಳನ್ನು ಹೊಂದಿದ್ದರೆಂಬ ಕಾರಣಕ್ಕಾಗಿ ನಮಗೆ ಆತ್ಮೀಯರಾಗುತ್ತಾರೆ. ಯಾವ ವಿಜ್ಞಾನ ಮತ್ತು ತಂತ್ರಜ್ಞಾನಗಳ ಶೋಧನೆಯಿಂದಾಗಿ ೧೯೪೫ರಲ್ಲಿ ಹಿರೋಷಿಮಾ ಮತ್ತು ನಾಗಾಸಾಕಿ ಪಟ್ಟಣಗಳ ಮೇಲೆ ಅಣು ಬಾಂಬ್ ಬೀಳುವ ಮುನ್ನ ವಿಶ್ವ ಯಾವ ಮಾನಸಿಕ ಹೊಯ್ದಾಟದ ಸ್ಥಿತಿಯಲ್ಲಿತ್ತೋ ಅದೇ ರೀತಿಯ ಹೊಯ್ದಾಟದ ಸ್ಥಿತಿಯಲ್ಲಿ ೨೦೦೫ನೇ ಇಸವಿಯಲ್ಲಿ ೬೦ವರ್ಷಗಳ ನಂತರವೂ ವಿಶ್ವ ಇದೆ. ತುಮುಲದ ಈ ಪರಿಸ್ಥಿತಿಯಲ್ಲಿ ಅಣುಬಾಂಬ್‌ನಂಥ ಭಯಾನಕ ಅಸ್ತ್ರದ ಶೋಧನೆಯಲ್ಲಿ ಮತ್ತು ಅದರ ತಯಾರಿಕೆಯಲ್ಲಿ ಪ್ರಧಾನ ಪಾತ್ರವಹಿಸಿದ್ದ ಐನ್‌ಸ್ಟೈನ್ ವಿನಾಶಕಾರಿ ವಿಜ್ಞಾನ, ಯುದ್ಧಮಯ ಜಗತ್ತು, ಮಾನವ-ಮಾನವ ಮಧ್ಯದ ಗೋಡೆಗಳು ಇತ್ಯಾದಿ ವಿಷಯಗಳನ್ನು ಕುರಿತು ಹೇಳಿದ ಮಾತುಗಳು ಇಂದಿನ ಜಾಗತಿಕ ಪರಿಸ್ಥಿತಿಯಲ್ಲಿ ಬಹಳ ಪ್ರಸ್ತುತವಾಗಿವೆ. ಪ್ರಪಂಚದ ಎಲ್ಲ ದೇಶಗಳು, ಅವು ಬಡತನದಲ್ಲಿರಲಿ, ಸಿರಿವಂತಿಕೆಯಲ್ಲಿರಲಿ ವಿನಾಶಕಾರಿ ಶಸ್ತ್ರಗಳ ತಯಾರಿಕೆಯ ಪೈಪೋಟಿಯಲ್ಲಿ ತೊಡಗಿವೆ. ಅಲ್ಲದೆ ಪ್ರಪಂಚದ ಒಂದಲ್ಲ ಒಂದು ಪ್ರದೇಶದಲ್ಲಿ ಸ್ಥಾನೀಯವಾಗಿ ಯುದ್ಧ ನಡೆದೇ ಇರುತ್ತದೆ. ಈ ಪ್ರಕಾರ ವಿವಿಧೆಡೆ ನಡೆಯುವ ಯುದ್ಧಗಳಲ್ಲಿ ಸಾಯುವವರ ಸಂಖ್ಯೆ ಮಹಾ ಯುದ್ಧಗಳಲ್ಲಿ ಸಾಯುವವರ ಸಂಖ್ಯೆಗೆ ಸಮನಾಗಿರುತ್ತದೆ. ಈ ಇಪ್ಪತ್ತೊಂದನೆ ಶತಮಾನವು ಅನೇಕ ವೈರುಧ್ಯಗಳ ಶತಮಾನವಾಗಿದೆ. ಅದರಲ್ಲಿ ಪ್ರಮುಖವಾದುದು ವಿಶ್ವ ಒಂದು ಪುಟ್ಟ ಗ್ರಾಮವಾಗುತ್ತಲಿದೆ ಎಂಬ ಮಾತಿನ ಬೆನ್ನಹಿಂದೆಯೇ ವಿಶ್ವವು ಗ್ರಾಮ ಸ್ವರೂಪವನ್ನು ತಾಳದಂತೆ ದೇಶಗಳು ಪರಸ್ಪರ ಕಾದಾಡುತ್ತಲೇ ಇರುವಂಥ ಪರಿಸ್ಥಿತಿಯನ್ನು ನಿರ್ಮಿಸುವ ಪ್ರಯತ್ನವೂ ಸಹ ನಡೆಯುತ್ತಿರುವುದೂ ಆಗಿದೆ. ಐನ್‌ಸ್ಟೈನ್‌ರು ವಿಶ್ವ ಸರ್ಕಾರದ ಕಲ್ಪನೆಯನ್ನು ಜಗತ್ತಿನ ಮುಂದೆ ಇಟ್ಟಿದ್ದಾರೆ. ಆದರೆ ಇಂದು ಸಂಯುಕ್ತ ರಾಷ್ಟ್ರ ಸಂಸ್ಥೆಯನ್ನೇ ಮೂಲೆಗುಂಪಾಗಿಸುವ ಹುನ್ನಾರ ಬಲಿಷ್ಠ ರಾಷ್ಟ್ರಗಳಿಂದ ನಡೆಯುತ್ತಿದೆ. ಶಸ್ತ್ರಾಸ್ತ್ರಗಳ ಪೈಪೋಟಿಯಲ್ಲಿ ತೊಡಗುವ ದೇಶ ಮೋಂಬತ್ತಿಯನ್ನು ಎರಡು ತುದಿಯಿಂದಲೂ ಉರಿಸುವಂಥ ಮೂರ್ಖ ಕೆಲಸ ಮಾಡುತ್ತದೆ. ಪೈಪೋಟಿಯಲ್ಲಿ ತೊಡಗುವ ದೇಶ ತನ್ನ ದೇಶವಾಸಿಗಳನ್ನು ದಿನೇದಿನೇ ಕಷ್ಟದ ಕೂಪಕ್ಕೆ ತಳ್ಳುವುದರ ಜೊತೆಗೆ ಜಗತ್ತನ್ನು ವಿನಾಶದ ಅಂಚಿಗೂ ತಂದು ನಿಲ್ಲಿಸುತ್ತದೆ. ಇದಕ್ಕೆ ಉದಾಹರಣೆಯಾಗಿ ಅಣು ಬಾಂಬಿನ ತಯಾರಿಕೆಯ ಇತಿಹಾಸವೇ ನಮ್ಮ ಮುಂದಿದೆ. ಎರಡನೇ ವಿಶ್ವ ಯುದ್ಧದ ಸಮಯದಲ್ಲಿ ಜರ್ಮನ್ ದೇಶಕ್ಕಿಂತಲೂ ಮೊದಲು ಅಮೇರಿಕಾ ಅಣು ಬಾಂಬ್ ತಯಾರಿಸಲು ನಿಶ್ಚಯಿಸಿತು. ಅಮೇರಿಕಾದ ಈ ನಿಶ್ಚಯಕ್ಕೆ ಐನ್‌ಸ್ಟೈನ್‌ರು ಬೆಂಬಲ ಕೊಟ್ಟರು.

ಅದಕ್ಕಾಗಿ ತೀವ್ರ ಗತಿಯಲ್ಲಿ ಸಂಶೋಧನೆ ಮೊದಲಾಯಿತು, ಮಿಲಿಯನ್‌ಗಟ್ಟಲೆ ಡಾಲರ್ ವಿನಿಯೋಗವಾಯಿತು. ಕೊನೆಗೆ ಎರಡೂ ದೇಶಗಳು ಅಣುಬಾಂಬ್‌ನ್ನು ತಯಾರಿಸಿದವು. ಆ ಬಾಂಬಿನ ಮೊದಲ ಉಪಯೋಗವನ್ನೇನೋ ಅಮೇರಿಕಾ ಮಾಡಿತಾದರೂ ವಿನಾಶಕಾರಿ ಬಾಂಬ್‌ನ್ನು ತಯಾರಿಸಿದ ಪಾಪಕ್ಕೆ ಅವೆರಡೂ ದೇಶಗಳು ಕಾರಣವಾದವು. ಅವುಗಳ ಶಸ್ತ್ರಾಸ್ತ್ರ ತಯಾರಿಕಾ ಪೈಪೋಟಿಯ ಭರದಲ್ಲಿ ವಿಶ್ವ ಭಸ್ಮವಾಯಿತು. ಆಗ ಸ್ವತಃ ಐನ್‌ಸ್ಟೈನ್‌ರಿಂದ "ಯುದ್ಧವನ್ನು ಗೆದ್ದೆವು ಶಾಂತಿಯನ್ನಲ್ಲ" ಎಂಬ ಉದ್ಗಾರ ಹೊರಟಿತು. ಶಾಂತಿಪ್ರಿಯ ದೇಶವೆಂದು ಕರೆದುಕೊಳ್ಳುವ ನಮ್ಮ ದೇಶ ಸಶಸ್ತ್ರಾಸ್ತ್ರ ಸೈನ್ಯ ಶಕ್ತಿವರ್ಧನೆಗಾಗಿ ವರ್ಷವರ್ಷಕ್ಕೂ ತನ್ನ ಬಜೆಟ್‌ನಲ್ಲಿ ಸಿಂಹಪಾಲು ಹಣವನ್ನು ಮೀಸಲಿಡುತ್ತಾ ಬಂದಿದೆ. ಇದೇ ನೀತಿ ಪ್ರತಿಯೊಂದು ದೇಶದ್ದೂ ಆಗಿದೆ. ಈ ವಿಷಯದಲ್ಲಿ ಅಮೇರಿಕಾ ಮುಂಚೂಣಿಯಲ್ಲಿದೆ. ಈ ಪ್ರಕಾರದ ಆತ್ಮವಿನಾಶಕಾರಿ ಶಸ್ತ್ರಾಸ್ತ್ರ ಪೈಪೋಟಿಯಿಂದ ಉಂಟಾಗಬಹುದಾದ ಅನಾಹುತವನ್ನು ಅರಿತಿದ್ದ ಸ್ವತಃ ವಿಜ್ಞಾನಿ ಐನ್‌ಸ್ಟೈನ್ ೧೯೪೬ರಲ್ಲಿ ಈ ರೀತಿ ಹೇಳಿದರು, "ಈಗ ನಾವು ಸ್ಪರ್ಧೆ ತ್ಯಜಿಸಿ ಸಹಕಾರವನ್ನು ಸ್ವೀಕರಿಸಬೇಕು. ಅಂತಾರಾಷ್ಟ್ರೀಯ ವಿಷಯಗಳೆಲ್ಲೆಲ್ಲಾ ಇದೇ ಪ್ರಧಾನ ವಸ್ತುವಾಗಬೇಕು. ಹಾಗಿಲ್ಲವಾದರೆ ನಾವು ದುರಂತವನ್ನು ಎದುರಿಸುವುದು ನಿಶ್ಚಿತ. ಗತಕಾಲದ ಚಿಂತನೆ ಮತ್ತು ರೀತಿ ವಿಶ್ವ ಯುದ್ಧಗಳನ್ನು ತಪ್ಪಿಸಲಿಲ್ಲ. ಭವಿಷ್ಯದಲ್ಲಿಯ ಚಿಂತನೆ ಯುದ್ಧಗಳನ್ನು ತಪ್ಪಿಸಲೇಬೇಕು." ಈ ಸಂದರ್ಭದಲ್ಲಿಯೇ ನಮಗೆ ವೈಚಾರಿಕತೆಯ ತುರ್ತು ಅಗತ್ಯವಿದೆ. ವಿನಾಶಕಾರಿ ವಿಜ್ಞಾನವನ್ನು, ತಂತ್ರಜ್ಞಾನವನ್ನು ಹಿಂದಕ್ಕೆ ತಳ್ಳಿ ಮಾನವತಾವಾದಿ ವೈಚಾರಿಕತೆ ಮುಂದೆ ಬರಬೇಕಿದೆ.

ಐನ್‌ಸ್ಟೈನ್ ವಿಜ್ಞಾನಿಯಾಗಿ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಅಂದರೆ ವಿನಾಶಕಾರಿಯಾದ ಬಾಂಬ್ ಕಡಿಮೆ ಹುಚ್ಚನ ಕೈಯಲ್ಲಿರಬೇಕೆ, ಹೆಚ್ಚು ಹುಚ್ಚನ ಕೈಯಲ್ಲಿರಬೇಕೆ ಎಂಬ ಪ್ರಶ್ನೆ ಉದ್ಭವಿಸಿದಾಗ ಪ್ರಪಂಚದ ಉಳಿವಿಗಾಗಿ ಕಡಿಮೆ ಹುಚ್ಚನ ಕೈಯಲ್ಲಿರುವುದನ್ನು ಸಮರ್ಥಿಸುತ್ತೇನೆ ಎಂಬುದಾಗಿ ಹೇಳಬೇಕಾಯಿತು. ಇದು ಅವರ ಜೀವನದ ಒಂದು ದೃಷ್ಟಿಕೋನದ ಪಾರ್ಶ್ವವನ್ನು ತೋರಿಸಿದರೆ ಅವರೇ ಹೇಳಿರುವ, "ಸಂಸ್ಕೃತಿಯ ಮೌಲ್ಯಗಳನ್ನು ಪೋಷಿಸುವಾತ ಶಾಂತಿವಾದಿ ಆಗದೇ ಇರಲಾರ." ಎಂಬ ಮಾತು ಅವರ ಹೃದಯ ವಜ್ರಕ್ಕಿಂತ ಕಠಿಣ, ಹೂವಿಗಿಂತ ಮೃದು ಎಂಬ ನಾಣ್ಣುಡಿಯನ್ನು ಪೋಷಿಸುತ್ತದೆ.

ಇಂದು ಎಲ್ಲ ಕ್ಷೇತ್ರಗಳಲ್ಲೂ ವೈಚಾರಿಕ ಕ್ರಾಂತಿ, ವೈಜ್ಞಾನಿಕ ದೃಷ್ಟಿ ಬರಬೇಕಾಗಿದೆ ಎಂಬ ಕೂಗು ಜೋರಾಗಿ ಕೇಳಿಬರುತ್ತಿದೆ. ಐನ್‌ಸ್ಟೈನ್‌ರ ಜೀವನ ಮತ್ತು ಅವರ ವಿಚಾರ ಧಾರೆಗಳು

ಅವರನ್ನು ಇಪ್ಪತ್ತನೇ ಶತಮಾನದ ವೈಚಾರಿಕ ವ್ಯಕ್ತಿಯೆಂದು ಸಿದ್ಧಗೊಳಿಸುತ್ತದೆ. ಆದರೆ ಅವರ ವೈಚಾರಿಕತೆ ರಾಜಸವಾದುದಾಗಲಿ, ತಾಮಸವಾದುದಾಗಲಿ ಆಗಿದ್ದಿರದೆ ಪರಮ ಸಾತ್ವಿಕವಾಗಿತ್ತೆಂಬುದಾಗಿ ಕಂಡುಬರುತ್ತದೆ. ಇಂದು ವೈಚಾರಿಕತೆಯ ಹೆಸರಿನಲ್ಲಿ ಬಡಿ, ಕಡಿ, ತುಳಿ, ಅವಮಾನಿಸು, ಹೀಯಾಳಿಸು, ಗಲ್ಲಿಗೆ ಹಾಕು ಇಂಥ ಆವೇಶಭರಿತ ಹಾಗೂ ವೈರಭಾವಪೂರಿತ ವಿಚಾರಗಳ ಮಂಡನೆಯಾಗುತ್ತಲಿದೆ. ಆದರೆ ಅದೇ ವೈಚಾರಿಕ ಕ್ರಾಂತಿಯ ಪ್ರಚೋದಕ ಐನ್‌ಸ್ಟೈನ್‌ರ ವಿಚಾರಗಳನ್ನು ಓದಿದರೆ ಅವು ಜೀವನದ ಪ್ರತಿಯೊಂದು ಕ್ಷೇತ್ರಕ್ಕೂ ಸಂಬಂಧಿಸಿದ್ದಾಗಿವೆ. ಎಲ್ಲಿಯೂ ನಮಗೆ ಪರನಿಂದನೆ, ಪರರ ತೇಜೋವಧೆ ಇತ್ಯಾದಿಗಳು ಕಾಣುವುದಿಲ್ಲ. ಅವರ ವಿಚಾರಗಳು ಸಮತಟ್ಟಾದ ಭೂಮಿಯ ಮೇಲೆ ಶಾಂತವಾಗಿ, ಗಂಭೀರವಾಗಿ ಹರಿಯುವ ಸುಜಲದಂತೆ ಅನುಭವಕ್ಕೆ ಬರುತ್ತದೆ. ವೈಚಾರಿಕತೆ ಬಯಸುವವರ ವೈಚಾರಿಕ ಕ್ರಮದಲ್ಲಿ ಬದಲಾವಣೆ ಅಗತ್ಯವಾಗಿದೆ ಎಂಬ ತಿಳುವಳಿಕೆ ಐನ್‌ಸ್ಟೈನ್‌ರನ್ನು ತಿಳಿದಾಗ ಗೊತ್ತಾಗುತ್ತದೆ. ಬಾಂಬಿನಷ್ಟೇ ದುರಂತವನ್ನು ಸೃಷ್ಟಿಸುತ್ತಿರುವ ಧರ್ಮಾಂಧತೆಯ ನಿವಾರಣೆಗಾಗಿ ನಾವು ಐನ್‌ಸ್ಟೈನ್‌ರ "ಧರ್ಮ ಮತ್ತು ದೇವರನ್ನು" ಕುರಿತಾದ ಅವರ ವಿಚಾರಗಳನ್ನು ತಿಳಿಯುವುದು ಸೂಕ್ತ ಉಪಾಯವಾಗಿದೆ. ಈ ಸಂದರ್ಭದಲ್ಲಿ ಐನ್‌ಸ್ಟೈನ್‌ರ ಸುಪ್ರಸಿದ್ಧವಾದ ಈ ಮಾತು ಹಳೆಯದಾಗಿದ್ದರೂ ನಿತ್ಯನೂತನವಾಗಿದೆ, "ಧರ್ಮರಹಿತ ವಿಜ್ಞಾನ ಕುಂಟು; ವಿಜ್ಞಾನರಹಿತ ಧರ್ಮ ಕುರುಡು." ಈ ಮಾತನ್ನು ಪ್ರಪಂಚದ ಎಲ್ಲ ಧರ್ಮಗಳೂ ಸ್ವೀಕರಿಸಿ ಅದರಂತೆ ನಡೆಯಬೇಕು. ಹಾಗೆಯೇ ತಂತ್ರಜ್ಞಾನ ಮತ್ತು ವಿಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುವವರು ಮಾನವೀಯ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕು. ವಿಶ್ವದ ಹಿತ ಚಿಂತನೆಯಲ್ಲಿ ತೊಡಗಿರುವ ವೈಚಾರಿಕರು ಯಾವ ಸ್ಥಳದಲ್ಲೇ ಇರಲಿ, ಯಾವ ಕಾಲದಲ್ಲೇ ಇರಲಿ ಅವರ ಮಧ್ಯೆ ಕಾಲ- ಆಕಾಶ ಯಾವುವೂ ಅಡ್ಡಿಬರುವುದಿಲ್ಲ ಎಂಬುದಕ್ಕೆ ವಿಜ್ಞಾನಿ ಐನ್‌ಸ್ಟೈನ್ ಮತ್ತು ತತ್ವ ಜ್ಞಾನಿ ವಿನೋಬಾರ ಮಧ್ಯೆ ಇರುವ ಈ ಸಾಪೇಕ್ಷಕ್ಕೆ ವಿನೋಬಾರವರು ವಿಜ್ಞಾನ–ವೇದಾಂತಾಧಾರಿತ–ವಿಶ್ವಾಸ ಕುರಿತು ರಚಿಸಿರುವ ಈ ಶ್ಲೋಕವೇ ಸಾಕ್ಷಿ.

ವೇದಾಂತೋ ವಿಜ್ಞಾನಂ ವಿಶ್ವಾಸಶ್ಚೇತಿ ಶಕ್ತಯಸ್ತಿಸ್ರಃ ।
ಯಾಸಾಂ ಸ್ಥೈರ್ಯೇ ನಿತ್ಯಂ ಶಾಂತಿ ಸಮೃದ್ಧೀ ಭವಿಷ್ಯತೋ ಜಗತಿ ॥

(ಗ್ರಂಥ ಋಣ ಹಲವಾರು)

* * *

ಪೇಟೆಂಟ್ ಉರುಳಿನೊಳಗೂ ಇದೆ ಒಂದವಕಾಶ ಮಲೇಶ್ಯಾದ ಮಾದರಿ

–ಶಾರದಾ ಗೋಪಾಲ

ಜನವರಿ ೧. ವಿಶ್ವ ವ್ಯಾಪಾರ ಸಂಸ್ಥೆಯು ೨೦೦೫ರ ಜನವರಿ ೧ನ್ನು ತಮ್ಮ ಬೌದ್ಧಿಕ ಆಸ್ತಿ ಹಕ್ಕು(ಪೇಟೆಂಟ್) ಕಾನೂನು ತಿದ್ದುಪಡಿಯು ಅಂತಿಮ ಗಡುವಾಗಿ ಕೊಟ್ಟಿತ್ತು. ಆ ಗಡುವಿಗನ್ವಯವಾಗಿ ನಮ್ಮ ಪಾರ್ಲಿಮೆಂಟ್ ಮುಂದಿದೆ ಪೇಟೆಂಟ್ ತಿದ್ದುಪಡಿ ಮಸೂದೆ. ಪೇಟೆಂಟ್ ತಿದ್ದುಪಡಿ ಮಸೂದೆಗೇಕಿಷ್ಟು ಮಹತ್ವ?

ಪೇಟೆಂಟ್‌ನಲ್ಲಿ ಎರಡು ವಿಧಗಳಿರುತ್ತವೆ. ಒಂದು ಪ್ರಕ್ರಿಯಾ ಪೇಟೆಂಟ್, ಅಂದರೆ ಒಂದು ವಸ್ತುವನ್ನು ತಯಾರಿಸುವ ವಿಧಾನದ ಮೇಲೆ ಬೌದ್ಧಿಕ ಸ್ವಾಮ್ಯವನ್ನು ಪಡೆಯುವುದು. ಎರಡನೆಯದು ವಸ್ತು ಪೇಟೆಂಟ್ ಅಂದರೆ ಆ ವಸ್ತುವಿನ ಮೇಲೆಯೇ ಪೇಟೆಂಟ್ ಪಡೆಯುವುದು. ನಮ್ಮ ದೇಶದಲ್ಲಿ ೧೯೭೦ರಲ್ಲಿ ಸರ್ಕಾರವು ಪ್ರಕ್ರಿಯಾ ಪೇಟೆಂಟ್‌ನ ಕಾನೂನನ್ನು ಅಂಗೀಕರಿಸಿತ್ತು. ಪರಿಣಾಮವಾಗಿ ಒಂದು ವಸ್ತುವನ್ನು ತಯಾರಿಸುವ ಒಂದು ವಿಧಾನದ ಮೇಲೆ ಮಾತ್ರ ಸ್ವಾಮ್ಯ ಹಕ್ಕು ಇರುತ್ತಿತ್ತು. ಅದೇ ವಸ್ತುವನ್ನು ಬೇರೆ ವಿಧಾನದಲ್ಲಿ ಬೇರೆ ಯಾರು ಬೇಕಾದರೂ ತಯಾರಿಸಬಹುದು. ಜೀವವಸ್ತುಗಳಮೇಲೆ ಪೇಟೆಂಟ್ ಇಲ್ಲ. ಔಷಧಗಳ ಮೇಲೆ ೫–೭ ವರ್ಷಗಳವರೆಗೆ ಮಾತ್ರ ಪೇಟೆಂಟ್. ಆ ನಂತರ ಅದನ್ನು ಯಾರು ಬೇಕಾದರೂ ಅದೇ ವಿಧಾನದಲ್ಲಿ ತಯಾರಿಸಬಹುದು.

೧೯೭೦ರ ಪೇಟೆಂಟ್ ಕಾನೂನಿನಿಂದ ಅತಿ ಹೆಚ್ಚು ಪ್ರಯೋಜನ ಪಡೆದದ್ದು ಔಷಧ ತಯಾರಿಕಾ ಕೈಗಾರಿಕೆ. ಒಂದೇ ಔಷಧವನ್ನು ಬೇರೆ ಬೇರೆ ಕಂಪನಿ ಬೇರೆ ಬೇರೆ ರೀತಿಯಲ್ಲಿ ತಯಾರಿಸುವ ಅವಕಾಶವಿದ್ದುದರಿಂದ ಸ್ಪರ್ಧೆ ಬೆಳೆಯಿತು. ಸ್ಪರ್ಧೆಯಿಂದಾಗಿ ಔಷಧಗಳ ಬೆಲೆ ಕಡಿಮೆಯಾಯ್ತು. ಇಂದು ಭಾರತದ ಔಷಧಗಳ ಬೆಲೆ ಇಡೀ ಜಗತ್ತಿನಲ್ಲಿಯೇ ಅತಿ ಸೋವಿ. ಅಮೇರಿಕಾ ಜರ್ಮನಿಗಳಲ್ಲಿ ವಾಸಿಸುತ್ತಿರುವವರೂ ಭಾರತಕ್ಕೆ ಭೇಟಿ ಕೊಟ್ಟಾಗ ಒಂದಷ್ಟು ಔಷಧಗಳನ್ನು ತಮ್ಮ ಜೊತೆ ಒಯ್ಯುತ್ತಾರೆ.

೭೦ರ ಪೇಟೆಂಟ್ ಕಾನೂನು ಮಾಡಿಕೊಟ್ಟ ಇನ್ನೊಂದು ಅವಕಾಶ ಇನ್ನೂ ಹೆಚ್ಚಿನದು. ವಿದೇಶಗಳಲ್ಲಿ ಪೇಟೆಂಟ್ ಆಗಿದ್ದರೂ ಕೂಡ ಆ ಔಷಧವನ್ನು ನಮ್ಮಲ್ಲಿ ತಯಾರಿಸುವ ಅವಕಾಶವಿದೆ. ಉದಾಹರಣೆಗೆ ಜೀವ ಉಳಿಸುವ ಔಷಧ ಪೆನಿಸಿಲಿನ್

ತಯಾರಾದದ್ದು ೧೯೪೧ರಲ್ಲಿ, ಆದರೆ ನಮ್ಮದೇಶದಲ್ಲಿ ಅದನ್ನು ತಯಾರಿಸಲು ಸಾಧ್ಯವಾದದ್ದು ೧೯೬೩ರಲ್ಲಿ, ಅಂದರೆ ೨೨ ವರ್ಷಗಳ ನಂತರ. ೭೦ರ ಪೇಟೆಂಟ್ ಕಾಯಿದೆ ಬಂದಮೇಲೆ ೧೯೭೭ರಲ್ಲಿ ಬಂದ ಮೆಬೆಂಡಾಝೋಲ್ ಔಷಧವನ್ನು ೧೯೭೮ರಲ್ಲಿಯೇ ಭಾರತದಲ್ಲಿ ತಯಾರಿಸಲು ಸಾಧ್ಯವಾಯಿತು.

೭೦ರ ಪೇಟೆಂಟ್ ಕಾನೂನಿನ ಅತಿದೊಡ್ಡ ಪ್ರಯೋಜನವಾದದ್ದೆಂದರೆ ಏಡ್ಸ್ ಔಷಧ ಉತ್ಪಾದನೆಯಲ್ಲಿ. ಏಡ್ಸ್ ರೋಗ ಅಮೇರಿಕಾದಲ್ಲಿ ವ್ಯಾಪಿಸುತ್ತಿದ್ದಂತೆಯೇ ಅಲ್ಲಿನ ಕಂಪನಿಗಳು ಸಮರೋಪಾದಿಯಲ್ಲಿ ಸಂಶೋಧನೆಯಲ್ಲಿ ತೊಡಗಿ, ರೋಗಕ್ಕೆ ಔಷಧವನ್ನು ಕಂಡುಹಿಡಿದವು. ಮೂರು ಔಷಧಗಳ ಸಂಯುಕ್ತ, ಎಂಟಿರೆಟ್ರೋ ವೈರಲ್ ಅದು. ಆದರೆ ಈ ಕಂಪನಿಗಳು ಮಾಡಿದ್ದೆಂದರೆ ಔಷಧವನ್ನು ಪೇಟೆಂಟ್ ಮಾಡಿಟ್ಟುಕೊಂಡು ಕುಳಿತುಬಿಟ್ಟವು.

ಪೇಟೆಂಟಿಗೊಳಗಾದ ಈ ಮೂರು ಔಷಧ ಸಂಯುಕ್ತಗಳ ಬೆಲೆ ಒಬ್ಬ ವ್ಯಕ್ತಿಗೆ ಒಂದು ವರ್ಷಕ್ಕೆ ೧೫೦೦೦ ಡಾಲರ್! ಖರೀದಿಸುವ ತಾಕತ್ತು ಇದ್ದವರು ಖರೀದಿಸಿ. ಅಮೇರಿಕಾ, ಯೂರೋಪಿನಲ್ಲೇನೋ ಏಡ್ಸ್ ಬಗ್ಗೆ ತಿಳುವಳಿಕೆ, ಔಷಧ ಲಭ್ಯತೆಯಿಂದಾಗಿ ರೋಗ ಹತೋಟಿಗೆ ಬಂತು. ಆದರೆ ಆ ವೇಳೆಗೆ ಇಡೀ ಪ್ರಪಂಚವನ್ನು ಆವರಿಸಿದ ಏಡ್ಸ್, ಅದರಲ್ಲೂ ಆಫ್ರಿಕಾದಲ್ಲಿ ಕಾಳ್ಗಿಚ್ಚಿನಂತೆ ವ್ಯಾಪಿಸಿ ಸಮುದಾಯಗಳನ್ನೇ ಆಹುತಿ ತೆಗೆದುಕೊಳ್ಳತೊಡಗಿತ್ತು. ಹತೋಟಿಗೆ ಔಷಧ ಲಭ್ಯವಿಲ್ಲ. ಒಬ್ಬ ರೋಗಿಗೆ ಒಂದು ವರ್ಷಕ್ಕೆ ೧೫೦೦೦ ಅಮೇರಿಕನ್ ಡಾಲರೆಂದರೆ ಯಾರಿಗೆ ಸಿಗಬೇಕು ಆ ಔಷಧ.

ಇಂಥ ಸಂದರ್ಭದಲ್ಲಿ ನೆರವಿಗೆ ಬಂದಿದ್ದು ಭಾರತದ ಜನರಿಕ್ ಡ್ರಗ್ ಇಂಡಸ್ಟ್ರಿ. ಅಂದರೆ ಔಷಧಗಳನ್ನು ಮೂಲರೂಪದಲ್ಲಿ ತಯಾರಿಸುವ ಕೈಗಾರಿಕೆ. ಆ ಔಷಧ ಪೇಟೆಂಟ್‌ಗೊಳಗಾಗಿದ್ದರೂ ಕೂಡ ಭಾರತದ ಕಾಯಿದೆಯಡಿಯಲ್ಲಿ ಅದನ್ನು ತಯಾರಿಸಬಹುದಿತ್ತು. ಎಂಟಿರೆಟ್ರೋ ವೈರಲ್‌ಗಳನ್ನು ಭಾರತದ ಸಿಪ್ಲಾ ಕಂಪನಿ ತಯಾರಿಸಿ ಕೇವಲ ೩೫೦ ಡಾಲರ್ ಬೆಲೆಗೆ ದಕ್ಷಿಣ ಆಫ್ರಿಕಾಕ್ಕೆ ಸರಬರಾಜು ಮಾಡಿತು. ಮುಂದೆ ದಕ್ಷಿಣ ಆಫ್ರಿಕಾ ಸರ್ಕಾರದ ಮೇಲೆ ಆ ಕಂಪನಿಗಳು ಕೇಸ್ ಹಾಕಿ, ಗಲಾಟೆಯಾಗಿ, ಕೇಸು ಹಿಂತೆಗೆದುಕೊಂಡಿದ್ದೆಲ್ಲ ಇತಿಹಾಸ.

ಅಮೇರಿಕಾದ ವಸ್ತು ಪೇಟೆಂಟನ್ನೇ ಎಲ್ಲ ದೇಶಗಳೂ ಜಾರಿಯಲ್ಲಿ ತರಬೇಕೆಂದು ವಿಶ್ವ ವ್ಯಾಪಾರ ಸಂಸ್ಥೆಯ ಷರತ್ತು. ೨೦೦೫ ಜನವರಿ ೧ ಇದಕ್ಕೆ ಗಡುವು. ಅದೇ ಈಗ ನಮ್ಮ ದೇಶಗಳ ಮುಂದಿರುವ ಅತಿ ದೊಡ್ಡ ಕುತ್ತು. ಇನ್ನು ಮುಂದೆ ಯಾವುದೇ ಔಷಧ ಬಂದರೂ ಜನರಿಕ್ ಡ್ರಗ್ ಇಂಡಸ್ಟ್ರಿ ಅದನ್ನು

ತಯಾರಿಸುವಂತಿಲ್ಲ. ಆ ಔಷಧಗಳ ಬೆಲೆ ಎಷ್ಟೇ ಜಾಸ್ತಿಯಾದರೂ ಸರ್ಕಾರ ಏನೂ ಮಾಡುವಂತಿಲ್ಲ. ಜನರ ಆರೋಗ್ಯ ಔಷಧ ಕಂಪನಿಗಳ ಮರ್ಜಿಯಲ್ಲಿ.

ಏಡ್ಸ್ ಔಷಧಗಳ ವಿಚಾರದಲ್ಲಿ ಜಾಗತಿಕವಾಗಿ ಗಲಾಟೆಯಾದಾಗ ವಿಶ್ವ ವ್ಯಾಪಾರ ಸಂಸ್ಥೆಯೂ ಕೊಂಚ ತಗ್ಗಿತ್ತು.ದೇಶದ ಸಮುದಾಯವೇ ಅನಾರೋಗ್ಯದ ಕುತ್ತಿನಲ್ಲಿ ಸಿಕ್ಕಿಕೊಂಡಾಗ, ಆ ಔಷಧ ಪೇಟೆಂಟಿಗೊಳಗಾಗಿದ್ದರೂ ಕೂಡ ಸರ್ಕಾರವು ದೇಶೀ ಕಂಪನಿಗಳಿಗೆ ಕಡ್ಡಾಯ ಲೈಸೆನ್ಸ್ ಕೊಟ್ಟು ಆ ಔಷಧ ತಯಾರಿಸಿ, ತನ್ನ ಸಮುದಾಯದ ರಕ್ಷಣೆ ಮಾಡಬಹುದು. ಅಥವಾ ಅದೂ ಸಾಧ್ಯವಾಗದಿದ್ದಲ್ಲಿ ಬೇರೆ ಯಾವುದೇ ದೇಶದಲ್ಲಿ ಅದೇ ಔಷಧ ಕಡಿಮೆ ಬೆಲೆಯಲ್ಲಿ ದೊರೆಯುತ್ತಿದ್ದರೆ ಆಮದು ಮಾಡಿಕೊಳ್ಳಬಹುದು. ಈ ಎರಡು ಅವಕಾಶಗಳನ್ನು ದೋಹಾ ಸಮಾವೇಶದಲ್ಲಿ ವಿಶ್ವ ವ್ಯಾಪಾರ ಸಂಸ್ಥೆಯು ಕೊಡಮಾಡಿದೆ.

ಆದರೂ ಈ ಅವಕಾಶಗಳನ್ನು ಉಪಯೋಗಿಸಿಕೊಳ್ಳದಂತೆ ಆಯಾ ದೇಶದ ಮೇಲೆ ಅಮೇರಿಕಾ ಒತ್ತಡ ತರುತ್ತಲೇ ಇದೆ. ಆ ಒತ್ತಡವನ್ನೂ ಮೀರಿ ಮಲೇಷಿಯಾ ದೇಶವು ತೃತೀಯ ಜಗತ್ತಿನ ಬಡ ದೇಶಗಳಿಗೆ ದಾರಿ ತೋರಿಸಿ ಮುನ್ನಡೆದಿದೆ. ಏಡ್ಸ್ ಹೆಮ್ಮಾರಿ ತನ್ನ ಸಮುದಾಯವನ್ನು ಕಬಳಿಸುತ್ತಿರುವುದನ್ನು ಮನಗಂಡ ಮಲೇಷಿಯಾ ಸರ್ಕಾರ ಎಂಟ್ರಿರೆಟ್ರೋ ವೈರಲ್‌ಗಳನ್ನು ತಯಾರಿಸಲು ತನ್ನ ದೇಶೀ ಕಂಪನಿಗಳಿಗೆ ಕಡ್ಡಾಯ ಲೈಸೆನ್ಸ್ ಕೊಟ್ಟುಬಿಟ್ಟಿದೆ. ಅದಕ್ಕೂ ಮೊದಲೇ ೨೦೦೨ರಲ್ಲಿ ಮಲೇಷಿಯಾ ಸರ್ಕಾರ ಭಾರತದಿಂದ ಕಡಿಮೆ ಬೆಲೆಯಲ್ಲಿ ಔಷಧಗಳನ್ನು ತರಿಸಿಕೊಳ್ಳಲಿಕ್ಕೂ ಆರಂಭಿಸಿತ್ತು. ಈ ಎರಡು ವಿಧಾನಗಳಿಂದಾಗಿ ಮಲೇಷಿಯಾದಲ್ಲಿ ಏಡ್ಸ್ ಔಷಧದ ಬೆಲೆ ಗಣನೀಯವಾಗಿ ತಗ್ಗಿತು. ಮೂಲ ಔಷಧಗಳು ಪೇಟೆಗೆ ಬರಲಾರಂಭಿಸಿದಾಗ ವಿದೇಶಿ ಕಂಪನಿಯ ಔಷಧಗಳಿಗೂ ಬೆಲೆ ತಗ್ಗಿಸದೇ ದಾರಿ ಉಳಿಯಲಿಲ್ಲ. ಔಷಧಗಳನ್ನು ಕೊಳ್ಳುವಾಗ ಜನರಿಗೆ ಕಡಿಮೆ ಬೆಲೆಯದನ್ನು ಖರೀದಿಸಲು ಅವಕಾಶವೊಂದು ಸೃಷ್ಟಿಯಾಯಿತು.

೨೦೦೧ರಲ್ಲಿ ಒಬ್ಬ ರೋಗಿಗೆ ಒಂದು ವರ್ಷದ ಔಷಧದ ಬೆಲೆ ೨೬೧ಡಾಲರ್ ಇದ್ದುದು ೨೦೦೪ರ ಹೊತ್ತಿಗೆ ೧೯೭ಡಾಲರ್‌ಗೆ ಇಳಿಯಿತು. ಅದೇ ಔಷಧವನ್ನು ಮೂಲ ರೂಪದಲ್ಲಿ(ಜನರಿಕ್ ಔಷಧ) ಕೊಂಡರೆ ಕೇವಲ ೪೫ಡಾಲರ್. ಅಂದರೆ ಅಷ್ಟೇ ಹಣದಲ್ಲಿ ಇನ್ನೂ ಐದು ಜನಕ್ಕೆ ಔಷಧ ಖರೀದಿಸಬಹುದು.

ಮಲೇಷಿಯಾಕ್ಕೆ ಸಾಧ್ಯವಾದದ್ದು ನಮಗೇಕೆ ಆಗುವುದಿಲ್ಲ ಎಂದು ಸವಾಲನ್ನು ಸ್ವೀಕರಿಸಿರುವ ಭಾರತ, ಚೀನಾ, ಥೈಲ್ಯಾಂಡ್‌ಗಳೂ ಕೂಡ ಕಂಪಲ್ಸರಿ ಲೈಸೆನ್ಸಿಂಗ್ ಅವಕಾಶವನ್ನು ಉಪಯೋಗಿಸಿಕೊಂಡು ಏಡ್ಸ್ ಔಷಧವನ್ನು ತಯಾರಿಸಿಕೊಳ್ಳುವ ಬಗ್ಗೆ ಗಂಭೀರವಾಗಿ

ಯೋಚಿಸುತ್ತಿವೆ ಎನ್ನುತ್ತದೆ ಒಂದು ವರದಿ. ಕೇವಲ ಏಡ್ಸ್ ಒಂದೇ ಅಲ್ಲ, ಮಲೇರಿಯಾ, ಕ್ಷಯ, ಕಾಲರಾ, ಡೇಂಗೆ ಜ್ವರಗಳಿಗೂ ಇದೇ ವಿಧಾನದಲ್ಲಿ ಔಷಧ ತಯಾರಿಸಿಕೊಳ್ಳಬಹುದು.

ಈಗ ಪ್ರಶ್ನೆಯೆಂದರೆ ಪೇಟೆಂಟಿಗೆ ತಿದ್ದುಪಡಿಯನ್ನು ಪಾರ್ಲಿಮೆಂಟಿನ ಒಪ್ಪಿಗೆಗಾಗಿ ಇಟ್ಟಿರುವ ಸರ್ಕಾರವು ಕಡ್ಡಾಯ ಲೈಸೆನ್ಸಿಂಗ್, ಸಮಾನಾಂತರ ಆಮದುಗಳ ಅವಕಾಶವನ್ನೇ ಇಟ್ಟುಕೊಂಡಿಲ್ಲ. ವಿಶ್ವ ವ್ಯಾಪಾರ ಸಂಸ್ಥೆಯೇ ಮಾಡಿಕೊಟ್ಟಿರುವ ಅವಕಾಶವನ್ನು ಕೈಬಿಟ್ಟು ತನ್ನ ಕೈಗಳನ್ನು ತಾನೇ ಹಗ್ಗ ಕೊಟ್ಟು ಕಟ್ಟಿಸಿಕೊಳ್ಳುತ್ತಿದೆಯೆ ಭಾರತ? ತೃತೀಯ ಜಗತ್ತಿನ ಮುಂದಾಳುವೆನಿಸಿರುವ ಭಾರತ ಇದೆಂಥ ರೀತಿಯ ಮುಂದಾಳತ್ವ ತೋರಿಸುತ್ತಿದೆ? ಕಡೆಗೆ ಮಲೇಷಿಯಾದ ಮಾದರಿಯನ್ನು ಅನುಸರಿಸಲು ಯಾವ ಕೈ ತಡೆಯುತ್ತಿದೆ?

ಹಿಂಸೆ ಮತ್ತು ಪ್ರಜಾಪ್ರಭುತ್ವ

-ಜೆ.ಆರ್.ಡಿ ತಾತಾ

ಅಹಿಂಸೆಯನ್ನು ಕಂಡುಹಿಡಿದದ್ದು ಮತ್ತು ಅಹಿಂಸೆಗೆ ಬದ್ಧವಾದ ಮಹಾನ್ ಮತಧರ್ಮಗಳನ್ನು ಸೃಷ್ಟಿಸಿದ್ದು ಪ್ರಾಯಶಃ ಭಾರತವೇ. ಗೌತಮ ಬುದ್ಧ, ಮಹಾವೀರರಲ್ಲಿ, ಹಿಂದೂ ಧರ್ಮದ ಅನೇಕ ಸಾಧು-ಸಂತರಲ್ಲಿ, ಮಹಾತ್ಮ ಗಾಂಧೀಜಿ ಸೇರಿದಂತೆ ಅನೇಕ ಸತ್ಪರುಷರಲ್ಲಿ ಅಹಿಂಸೆ ಪ್ರಕಟಗೊಂಡಿದೆ, ಪ್ರಸಾರಗೊಂಡಿದೆ. ಹೀಗಿರುವಾಗ ಈ ದೇಶ ಹಿಂಸೆಯ ಕಪಿಮುಷ್ಟಿಯಲ್ಲಿ ಸಿಕ್ಕಿರುವುದು ಎಂಥ ವಿಚಿತ್ರ, ಎಂಥ ವೈಪರೀತ್ಯ !

ಹಿಂದಿನ ಸಾಧು ಸಂತರೇನೊ ಹಳ್ಳಿಯ ಕಾಲದವರು. ಸಾವಿರಾರು ವರ್ಷಗಳ ಅಂತರ ನಮಗೂ ಅವರಿಗೂ. ಆದರೆ ಗಾಂಧೀಜಿ - ನಮ್ಮ ಕಾಲದಲ್ಲೆ ಇದ್ದವರು. ಎಷ್ಟೊಜನ ಅವರನ್ನು ನೋಡಿದವರು ಇನ್ನೂ ಇದ್ದಾರೆ. ನಾನೂ ನೋಡಿದ್ದೆ. ಒಬ್ಬ ಮಾನವ ವ್ಯಕ್ತಿಯಾಗಿ ನೋಡಿದ್ದೆ. ಗಾಂಧೀಜಿ ಅದ್ಭುತ ವ್ಯಕ್ತಿ. ಅವರ ನಗೆಯೆ ಸಾಕು, ಹಾಸ್ಯದ ಚಟಾಕಿಯೆ ಸಾಕು ನಿಮ್ಮನ್ನು ಸೆರೆಹಿಡಿದು ಬಿಡುತ್ತಿತ್ತು. ಇಂಥ ಅಹಿಂಸೆಯ ಪರಂಪರೆಯೇ ನಮ್ಮ ಹಿಂದೆ ಇರುವಾಗ, ಹಿಂಸೆಯ ಬಗ್ಗೆ ನಾನು ಮಾತನಾಡಬೇಕಾಗಿರುವುದು ದೊಡ್ಡ ಆಶ್ಚರ್ಯ. ನನಗಂತೂ ನಾಚಿಕೆ ಎನಿಸುತ್ತದೆ.

ನಮ್ಮ ನಾಡಿಗೆ, ನಮ್ಮ ಪ್ರಜಾಪ್ರಭುತ್ವಕ್ಕೆ, ನಮ್ಮ ಭವಿಷ್ಯಕ್ಕೆ ಹಾಗೂ ನಮ್ಮ ದೇಶದ ಕೊಟ್ಯಂತರ ಜನಕ್ಕೆ, ಅಷ್ಟೆ ಅಲ್ಲ ಮುಂದೆ ಹುಟ್ಟುವ ಜನಕೋಟಿಗೆ, ಈ ಹಿಂಸಾವೃತ್ತಿ ಒಂದು ದೊಡ್ಡ ಆಪತ್ತು. ಹಾಗೆಂದು ಭಾವಿಸಿದರೆ ಮಾತ್ರ ಸಾಲದು. "ಶಾಂತಿಯಿಂದ ಇರಿ" ಎಂದು ನಾನು ಹೇಳಿಬಿಟ್ಟರೆ ಸಾಕು ಎಂದರೆ ಸರಿ ಎನಿಸಬಹುದು. ನಿಮಗೆ ಏನಾದರೂ ಸಮಸ್ಯೆ ಬಂದರೆ ಶಾಂತಿಯಿಂದ ಬಗೆಹರಿಸಿಕೊಳ್ಳಿ. ನಿಮ್ಮಲ್ಲಿ ಶಾಂತಿಯಿಂದ ಇರಿ. ಯಾರೊಡನೆ ಸಮಸ್ಯೆ ಬಂದಿದೆಯೊ, ಅವರೊಡನೆ ಶಾಂತಿಯಿಂದ ವರ್ತಿಸಿ ಹೀಗೆಲ್ಲ ಸುಲಭವಾಗಿ ಹೇಳಬಹುದು.

ಆದರೆ ಅಷ್ಟು ಸಾಲದು ಹಿಂಸೆಯ ಸಮಸ್ಯೆಯನ್ನು ಎದುರಿಸಬೇಕಾದರೆ, ಹಿಂಸೆಯ ಮೂಲ ಎಲ್ಲಿದೆ ಎಂದು ತಿಳಿಯಬೇಕು. ನನ್ನ ಅನುಭವದಲ್ಲಿ ನನಗೆ

ನಿಚ್ಚಳವೆನಿಸಿದೆ ಹಿಂಸೆಯ ಬೇರು ಇರುವುದು ಅಸಮಧಾನದಲ್ಲಿ. ನಮ್ಮ ದೇಶದ ಬಹುಸಂಖ್ಯೆಯ ಜನರಿಗೆ ಸಲ್ಲಬೇಕಾದುದು ಸಲ್ಲದೆ ಉಂಟಾಗಿರುವ ಅಸಮಧಾನದಲ್ಲಿ. ಆದ್ದರಿಂದ ಸಮಸ್ಯೆ ಏನು ಎಂಬುದನ್ನು ಅರಿತುಕೊಳ್ಳ ಬೇಕಾದುದು ಯೋಚನೆಮಾಡಬಲ್ಲ ನಮ್ಮ ಕರ್ತವ್ಯ. ಇಷ್ಟೊಂದು ಭಾರೀ ಸಂಖ್ಯೆಯ ನಮ್ಮ ಜನ ಏಕೆ ಹೀಗೆ ಅತೃಪ್ತಿಯಲ್ಲೆ ಬಾಳಬೇಕಾಗಿದೆ?

ಸಮಸ್ಯೆಯ ಆಳಕ್ಕೆ ಹೋದಂತೆ ಕೇವಲ ಅಹಿಂಸೆಯ ಜಪಮಾಡಿದರೆ ಸಾಲದು ಎನಿಸುತ್ತದೆ. ಹಿಂಸೆಯನ್ನು ಬಿಡಬೇಕು, ಸರಿ ಬಿಡಬೇಕು. ನಾವೆಲ್ಲ ಒಂದಲ್ಲ ಒಂದು ಸಲ ಕೋಪ ಮಾಡಿಕೊಂಡೇ ಇರುತ್ತೇವೆ . ಸಿಡಿಮಿಡಿಗೊಂಡಿದ್ದೇವೆ. ಕೋಪ ಹಿಂಸೆಯ ಆರಂಭ. ಮಾನಸಿಕವಾಗಿಯೂ ಸಹ ಕಷ್ಟ, ಸಂಕಟ, ನೋವು, ದೀನತೆ,ಬಡತನ, ಕೊರತೆ ಕಂಡರೆ ನನಗೆ ಕೋಪ ಬರುತ್ತದೆ.

ವರ್ಷ ವರ್ಷವೂ ಇದೇ ರಾಗ, ನೋವು ಸಂಕಟ ಕೊರತೆ. ಅವಕಾಶವಂಚನೆ, ಅದೇ ನಿಯಮ, ಅದೇ ತಪ್ಪು ನಿಯಮ. ಜನರ ಮೇಲೆ ನಿಯಮಗಳ ಹೊರೆ. ನಾವು ಏನೂ ಮಾಡೆವು. ಸರ್ಕಾರದ ಕೆಲಸ ಮಾಡಿಕೊಳ್ಳಲಿ, ಅವರ ತಲೆಪಾಡು ಎಂದು ಬಿಡುತ್ತೇವೆ. ನಮ್ಮ ಸುತ್ತ ಕಾಣುವ ಅಭಾವ,ಬಡತನಗಳಿಗೆ ಕಾರಣ ನಮ್ಮ ಜನಸಂಖ್ಯೆಯ ಹೆಚ್ಚಳ ನಮ್ಮಗೆ ಇದು ಗೊತ್ತು.

ಪ್ರತಿ ವರ್ಷವೂ ೧೭೦ ಲಕ್ಷ ಜೀವಿಗಳನ್ನು ನಾವು ಜನಸಂಖ್ಯೆಗೆ ಸೇರಿಸುತ್ತೇವೆ. ಅವರಿಗೆಲ್ಲ ಹೊಟ್ಟೆಪಾಡಿನ ವ್ಯವಸ್ಥೆ ಆಗಬೇಕು. ಈ ಹೊಸ ಪೀಳಿಗೆ ಬೆಳದಂತೆಲ್ಲ ಅವರಿಗೆ ಬಾಳಿನ ಎಷ್ಟೊ ಒಳ್ಳೆಯ ವಸ್ತುಗಳು ಸಿಗದೇ ಹೋಗುತ್ತವೆ. ನಮಗೆ ಗೊತ್ತು. ಆದ್ದರಿಂದ ನಾವು ಭಾರತೀಯರು, ಸಿನಿಮಾ, ಫುಟ್ಬಾಲ್ ಅಥವಾ ಇತರ ಮೋಜುಗಳಲ್ಲಿ ವಹಿಸುವ ಆಸಕ್ತಿಯನ್ನು, ನಮ್ಮ ಮುಂದಿನ ಪೀಳಿಗೆಯ ಯೋಗಕ್ಷೇಮದ ಬಗ್ಗೆ ಅಗತ್ಯಗಳ ಬಗ್ಗೆ ವಹಿಸುವುದಿಲ್ಲ. ಬಹುಪಾಲು ನಾವು ಹೀಗೆಯೆ.

ನಮ್ಮ ಬದುಕಿನಲ್ಲಿ ನಮ್ಮ ಪಾತ್ರ ನಾವು ವಹಿಸಬೇಕು ನಿಜ ಆದರೆ ಬಡತನ, ದೀನತೆಯಲ್ಲಿ ಮುಳುಗಿರುವ ಇತರ ಜನಕೋಟಿಯ ಬಗ್ಗೆ ನಮಗೆ ಜವಾಬುದಾರಿ ಇದ್ದೇಇದೆ.

ನಾನೇನು ನಿಮಗೆ ಬೋಧನೆ ಮಾಡುತ್ತಿಲ್ಲ. ಆದರೆ ನಾವೇನು ಮಾಡಬಹುದೋ ರಚನಾತ್ಮಕವಾಗಿ ಯೋಚಿಸೋಣ. ನಮ್ಮ ಪ್ರತಿನಿಧಿಗಳ ಆಯ್ಕೆಯಲ್ಲಿ, ನಮ್ಮ ಸರ್ಕಾರದ ಆಯ್ಕೆಯಲ್ಲಿ, ನಮ್ಮ ರಾಜಕಾರಣಿಗಳನ್ನು ಬೆಂಬಲಿಸುವಲ್ಲಿ ನಾವು ಏನು ಮಾಡಬಹುದೊ ಯೋಚಿಸೋಣ. ನನಗೆ ಅನಿಸುತ್ತದೆ. ರಾಜಕಾರಣಿಗಳಿಗೆ ದೇಶದ ಚಿಂತೆ ಅತಿ ಕಡಿಮೆ. ವಾಸ್ತವವಾಗಿ ಅವರಿಗೆ ಹೆಚ್ಚು ಚಿಂತೆ ಇರಬೇಕು. ಆದರೆ ನಾವೇ ಯೋಚಿಸೋಣ ನಾವೇ ಅರಿತುಕೊಳ್ಳೋಣ ಅರಿಯುವಿಕೆಯಿಂದಲೇ ಆರಂಭಿಸೋಣ.

ನಮ್ಮ ನಾಡಿನಲ್ಲಿ ಎಷ್ಟೊ ಮಕ್ಕಳು ಶಾಲೆಯನ್ನೇ ಕಾಣರು. ಉತ್ತರ ಭಾರತದಲ್ಲಂತೂ ನೂರು ಮಂದಿ ಹೆಣ್ಣು ಮಕ್ಕಳಲ್ಲಿ ೯೦ ಮಂದಿ ಶಾಲೆಗೆ ಹೋಗುವುದಿಲ್ಲ. ಬರೆಯುವುದಿರಲಿ, ಓದಲೂ ಬಲ್ಲವರಿಲ್ಲ. ಗಂಡಸರು ಸ್ವಲ್ಪ

ಮೇಲು, ಅಕ್ಷರ ಜ್ಞಾನದಿಂದ ಶಿಕ್ಷಣ ಆರಂಭವಾಗಬೇಕು.

ನಾನು ಹುಟ್ಟಿದ್ದು ಫ್ರಾನ್ಸ್‌ನಲ್ಲಿ. ಶಿಕ್ಷಣವೂ ಸ್ವಲ್ಪ ಅಲ್ಲೆ. ಅದು ಅತ್ಯಂತ ಸುಶಿಕ್ಷಿತ ದೇಶ. ಇತ್ತೀಚೆಗಷ್ಟೆ ಗೊತ್ತಾಯಿತು. ಅಲ್ಲಿನ ಅತ್ಯಂತ ಪ್ರಮುಖ ರಾಜಕಾರಣಿ ಮಂತ್ರಿ ರಾಷ್ಟ್ರಾಧ್ಯಕ್ಷನಲ್ಲ, ಗೃಹಮಂತ್ರಿಅಲ್ಲ, ರಕ್ಷಣಾಮಂತ್ರಿಅಲ್ಲ, ಅರ್ಥಮಂತ್ರಿಯೂ ಅಲ್ಲ, ಆತ ಶಿಕ್ಷಣ ಮಂತ್ರಿ!

ಶಿಕ್ಷಣದ ಪ್ರಾಮುಖ್ಯ ನಮಗೆ ಮನದಟ್ಟಾಗಲಿ, ನಮ್ಮ ಜನರಲ್ಲಿ ಶಿಕ್ಷಣ ಹಬ್ಬಲಿ. ಅವರು ರಾಜಕಾರಣಿಗಳಾದಾಗ ಆ ಶಿಕ್ಷಣವನ್ನು ವಿವೇಕ ರೀತಿಯಲ್ಲಿ ಉಪಯೋಗಿಸಲಿ. ಹೀಗೆ ಹಾರೈಸಬಲ್ಲೆ ಮಾತ್ರ.

ಕನ್ನಡ ಸಂಗ್ರಹ- ನೀಲತ್ತಹಳ್ಳಿಕಸ್ತೂರಿ
ಕೃಪೆ-ಭವನ್ಸ್ ಜನರಲ್

ಪಾಶವೀ ಬಲಪ್ರಯೋಗದ ವಿಧಾನಗಳನ್ನು ವಿಸರ್ಜಿಸುವ ಸಲುವಾಗಿ ಕಾನೂನಿನ ಮೇಲೆ ನಿಂತಿರುವ ಅತೀತ ರಾಷ್ಟ್ರೀಯ ವ್ಯವಸ್ಥೆ ರಚಿತವಾದಾಗ ಮಾತ್ರ ಮಾನುಕುಲಕ್ಕೆ ರಕ್ಷಣೆ ಒದಗೀತು.

-ಐನ್‌ಸ್ಟೈನ್

ಎ.ಕೆ.೪೭ ಬಂದೂಕಿನ ಆತ್ಮರೋದನ !

–ಜಗನ್ನಾಥ. ಅ.ಸಣ್ಣೂರ

ನಿಜ, ನಾನು ಈ ಭೂಮಿಯ ಮೇಲೆ ಹುಟ್ಟಿದ್ದಕ್ಕೆ ಪಶ್ಚಾತ್ತಾಪ ಪಡುತ್ತಿದ್ದೇನೆ. ಯಾಕಾದರೂ ನಾನು ಬದುಕಿದ್ದೇನೆ ಎಂದು ದಿನಂಪ್ರತಿ ಒಳಗೊಳಗೇ ಶಪಿಸಿಕೊಳ್ಳುತ್ತೇನೆ. ನನ್ನನ್ನು ಹುಟ್ಟಿಸಿದ ಮಿಖಾಯಿಲ್ ಕಲಶ್ನಿಕೋವ್‌ನ ಮೇಲೆ ಪ್ರೀತಿ ಮತ್ತು ದ್ವೇಷ ಎರಡೂ ಒಮ್ಮೆಲೇ ಬರುತ್ತದೆ. ಸರಿಯಾಗಿ ೫೭ ವರ್ಷಗಳ ಹಿಂದೆ ಅಂದರೆ ೧೯೪೭ ರಲ್ಲಿ ರಶಿಯಾ ದೇಶದ ಒಂದು ಹಳ್ಳಿಯ ಬಡ ಕುಟುಂಬವೊಂದರಲ್ಲಿ ನನ್ನ ಜನನವಾಯಿತು.

ನನ್ನ ತಂದೆ ಆ ಸಮಯದಲ್ಲಿ ತನ್ನ ದೇಶಬಾಂಧವರನ್ನು ಉಳಿಸಲು, ಶತ್ರುವಿನೊಡನೆ ಕಾದಾಡಿ ಜನಾಂಗದವರ ರಕ್ಷಣೆಗೆಂದು ನನ್ನನ್ನು ಹುಟ್ಟಿಸಿದ, ಬೆಳೆಸಿದ. ಆಗ ಆತನ ಉದ್ದೇಶ ಒಳ್ಳೆಯದೇ ಆಗಿತ್ತು. ಆತನ ಆ ಆಸೆಯನ್ನು ನಾನು ಪೂರೈಸಿದ್ದೆ ಕೂಡ.

ಬರುಬರುತ್ತಾ ನಾನು ಬೆಳೆದಂತೆ ನನ್ನ ವಿಜಯ ಗಾಥೆ, ಒಬ್ಬರಿಂದ ಮತ್ತೊಬ್ಬರಿಗೆ, ದೇಶದಿಂದ ವಿದೇಶಕ್ಕೆ ಹರಡತೊಡಗಿತು. ಅದರಿಂದ ನಾನು ಸಂತೊಷಪಟ್ಟಿದ್ದೆ. ಅನ್ಯಾಯದ ವಿರುದ್ಧ ಹೋರಾಡುವ ನನ್ನ ಗುರಿ ಸಾರ್ಥಕವಾಗಿತ್ತು. ನನ್ನ ಹೆಸರಿನಲ್ಲಿ ಚಲನಚಿತ್ರಗಳೂ ಬಂದವು. ಮಾಧ್ಯಮಗಳು ನನ್ನ ವರ್ಚಸ್ಸನ್ನು ಹೆಚ್ಚಿಸಿದವು.

ಆದರೆ ಯಾವಾಗ ಸ್ವಾರ್ಥಪರ ಜನರು ನನ್ನನ್ನು ದುರುಪಯೋಗಪಡಿಸಿಕೊಳ್ಳಲು ಪ್ರಾರಂಭಿಸಿದರೋ, ಯಾವಾಗ ನನ್ನನ್ನು ಅವರ ಕೈಬೊಂಬೆ ಮಾಡಿಕೊಂಡರೋ ಅಂದಿನಿಂದ ನನ್ನ ನೋವು ಸಂಕಟ ಪ್ರಾರಂಭವಾಯಿತು. ನನ್ನ ಉದ್ದೇಶವನ್ನೇ ಅವರು ಮಣ್ಣುಪಾಲಾಗಿಸಿದರು. ನಾನು ಯಾರನ್ನು ಕೊಲ್ಲಬೇಕೆಂದು ನನ್ನ ತಂದೆ ಹೇಳಿದ್ದನೋ ಇಂದು ಅವರ ಪರವಾಗಿಯೇ ನಾನು ಬೆಳೆದು ನಿಂತಿದ್ದನ್ನು ನೋಡಿದರೆ ನಾನು ಯಾಕಾದರೂ ಇನ್ನೂ ಬದುಕಿದ್ದೇನೆ ಎಂದೆನಿಸುತ್ತದೆ.

ಈ ದುಃಸ್ಥಿತಿಗೆ ನನ್ನ ಕಣ್ಣಲ್ಲಿ ರಕ್ತ ಬರುವಂತಾಗಿದೆ! ಸ್ವಾರ್ಥಿ ಜನರ ಕೈಗೊಂಬೆಯಾಗಿ ಅವರು ಹೇಳಿದ್ದನ್ನೆಲ್ಲಾ ಮಾಡಿದ್ದಕ್ಕೆ ಪರಮ ಪಶ್ಚಾತ್ತಾಪವಿದೆ. ಸಾವಿರಾರು ಅಮಾಯಕರ ರಕ್ತ ಮತ್ತು ಕಣ್ಣೀರು ನೋಡಿ ನೋಡಿ ಸಾಕಾಗಿದೆ.

ಭಯೋತ್ಪಾದಕರ ಮಿತ್ರನಾಗಿ ಅವರ ಆಪ್ತ ಸಹಾಯಕನಾಗಿ ನಾನು ಮಾಡಿದ ಭಯಂಕರ ಘೋರ ಅನಾಹುತಗಳಿಗೆ ನನಗೆ ಕ್ಷಮೆಯೇ ಇಲ್ಲ! ಆದರೂ ನಾನು ಅಸಹಾಯಕ. ಇದರಲ್ಲಿ ನನ್ನ ತಪ್ಪೇನೂ ಇಲ್ಲ. ನನ್ನನ್ನು ದುರುಪಯೋಗಕ್ಕೊಳಪಡಿಸಿ ತಮ್ಮ ಸ್ವಾರ್ಥಕ್ಕೆ ಬಳಸಿದ್ದು ನಿಮ್ಮ ತಪ್ಪಲ್ಲವೆ?

ಅವಮಾನವೀಯ, ಪರಮಸ್ವಾರ್ಥಿ ದುಷ್ಟರೆ, ಅಪಘಾನಿಸ್ತಾನ, ಸೋಮಾಲಿಯಾ, ಇಂಡೋನೇಶಿಯಾ, ಇರಾನ್, ಇರಾಕ್, ಕಾಶ್ಮೀರ ಒಂದೇ ಎರಡೇ ಹಲವಾರು ದೇಶಗಳಲ್ಲಿ ನನ್ನನ್ನು ಮನ ಬಂದಂತೆ ಬಳಸಿದ್ದು ನಿಮ್ಮ ಮೂರ್ಖತನವಲ್ಲದೆ ಮತ್ತೇನು? ನಾನು ಸಾಯುವುದನ್ನು ಇಷ್ಟಪಡಲಾರಿರಿ ಯಾಕೆ? ಎಲ್ಲಾ ಅವಾಂತರಗಳಿಗೂ ನನ್ನನ್ನು ಬಲಿಪಶು ಮಾಡುತ್ತಿದ್ದೀರಿ, ಇದು ನಿಮಗೆ ಶೋಭೆ ಅಲ್ಲ ಬಿಟ್ಟು ಬಿಡಿ ನನ್ನನ್ನು . . . .ಎಂದು ಬೇಡಿಕೊಳ್ಳೋಣ ಎಂದರೆ ರಕ್ತ ದಾಹದ ನಗುವಿನಲ್ಲಿರುವ ನಿಮಗೆ ನನ್ನ ಕೂಗು, ನನ್ನ ನೋವು ಕೇಳಿಸುವುದಾದರೂ ಹೇಗೆ?

ಅಂದು ನನ್ನ ತಂದೆಯು ಉತ್ತಮ ಉದ್ದೇಶಕ್ಕೆ ಜನ್ಮತಾಳಿದ ನಾನು ಇಂದು ನಿಮ್ಮ ಸ್ವಾರ್ಥಕ್ಕೆ ನನ್ನನ್ನು ಬಳಸಿ ಇಡೀ ನಿಮ್ಮ ಮಾನವ ಜಾತಿಗೆ ಶಾಪ, ಮೃತ್ಯುವಾಗಿ ಮಾಡುತ್ತಿರುವ ನಿಮಗೆ ಬುದ್ಧಿ ಹೇಳುವುದಾದರೂ ಹೇಗೆ?

ಕೊನೆಯದಾಗಿ ಕೈ ಮುಗಿದು ಕೇಳುತ್ತಿದ್ದೇನೆ. ಈಗ ಮಾಡಿದ್ದು ಸಾಕು, ಮುಂದಿನ ಅನಾಹುತಗಳಿಗೆ ನನ್ನನ್ನು ಕಾರಣ ಮಾಡಿ ಘೋರ ಅನಾಹುತಗಳಿಗೆ ಸಾಕ್ಷಿ ಮಾಡಬೇಡಿ. ನನ್ನನ್ನು ಬಿಟ್ಟು ಬಿಡಿ. ನೀವೂ ಸುಖವಾಗಿ ಬಾಳಿ, ಒಂದು ವೇಳೆ ಹೀಗೆಯೇ ನಿಮ್ಮ ಸ್ವಾರ್ಥಕ್ಕೆ ನನ್ನನ್ನು ಬಳಸಿಕೊಂಡರೆ ನನ್ನಿಂದ ಇಡೀ ನಿಮ್ಮ ಮಾನವ ಜನಾಂಗವೇ ಸರ್ವನಾಶವಾದೀತು! ಇದು ನನ್ನ ಅಂತಿಮ ಎಚ್ಚರಿಕೆ! ಈಗ ನಾನು ಯಾರೂಂತ! ಅರ್ಥವಾಯಿತೆ? ಹೌದು ಇದುವರೆಗೂ ನೊಂದು ಮಾತಾಡಿದ್ದು ನಾನೇ ಎ.ಕೆ-೪೭ ಬಂದೂಕು!

* * *

ಭಗವಂತನ ಬಗ್ಗೆ ಅದೆಷ್ಟುಸಲ ಪ್ರಸ್ತಾವಿಸಲು ಐನ್‌ಸ್ಟೈನ್ ಒಲವುಳ್ಳವರಾಗಿದ್ದರೆಂದರೆ ಅವರೊಬ್ಬ ರಹಸ್ಯ ವೇದಾಂತಿ ಆಗಿರಬೇಕೆಂದು ನಾನು ಸಂದೇಹಿಸುವಂತಾಯಿತು.

–ಮೇರಿ ಕ್ಯೂರಿ

ಥಾಮಸ್ ಆಲ್ವ ಎಡಿಸನ್

(ಪ್ರಪಂಚ ಕಂಡಿರುವ ಅನೇಕ ಮಹಾನ್ ವಿಜ್ಞಾನಿಗಳಲ್ಲಿ ಥಾಮಸ್ ಆಲ್ವ ಎಡಿಸನ್ ಕೂಡ ಒಬ್ಬನು. ಅವನ ಅನೇಕ ಶೋಧನೆಗಳು ಮಾನವ ಕುಲಕ್ಕೆ ಬಹಳ ಉಪಕಾರಿಯಾಗಿವೆ. ಈ ವಿಜ್ಞಾನಿಯು ೧೮೪೭ ಫೆಬ್ರವರಿ ಮಾಹೆಯಲ್ಲಿ ಜನ್ಮ ತಳೆದನು. ಆ ಶ್ರೇಷ್ಠ ವಿಜ್ಞಾನಿಯ ನೆನಪಿಗಾಗಿ ಈ ಲೇಖನ)

ಥಾಮಸ್ ಎಡಿಸನಿನ ದಾರಿದ್ರ್ಯವೆಲ್ಲ ಹತವಾಯಿತು. ಅವನಿಗಿದ್ದ ಕೊರತೆ ಪ್ರಯೋಗಕ್ಕೆ ಸಾಕಷ್ಟು ಹಣವಿಲ್ಲವಲ್ಲ ಎಂಬುದು. ಈಗ ಅವನು ಹೊಸ ಹೊಸ ಸಂಶೋಧನೆಗಳನ್ನು ಮಾಡಲು ತನ್ನ ಜೀವಮಾನವನ್ನೇ ಮೀಸಲಾಗಿಡಬೇಕೆಂದು ಬಗೆದನು. ತನಗೆ ಬಂದ ಹಣವನ್ನು ಮೂಲಧನವನ್ನಾಗಿ ಮಾಡಿಕೊಂಡು ನ್ಯೂಜರ್ಸಿ ಪ್ರಾಂತ್ಯದಲ್ಲಿ ಪ್ರಯೋಗಶಾಲೆಯನ್ನೂ. ಸ್ವಂತ ಕಾರ್ಖಾನೆಯನ್ನೂ ತೆರೆದನು. ಹಲವು ಜನ ಕೆಲಸಗಾರರನ್ನು ನೇಮಿಸಿ ಕೊಂಡನು. ಅವನ ಸರ್ವವ್ಯಾಪಕ ಸಂಶೊಧನೆಯ ಜೀವನ ಆರಂಭವಾಯಿತು. ಅವನು ದಿನಕ್ಕೆ ಇಪ್ಪತ್ತು ಗಂಟೆಗಳ ಕಾಲ ದುಡಿಯುತ್ತಿದ್ದನು. ಒಂದೊಂದು ಸಾರಿ ಇಪ್ಪತ್ನಾಲ್ಕು ಗಂಟೆಗಳೂ ಬೇಕಾಗುತ್ತಿದ್ದವು. ಅನೇಕ ದಿನಗಳು ಅವನು ನಿದ್ದೆ ಮಾಡಿದ್ದೇ ಇಲ್ಲ. ದುಡಿದು ಬಳಲಿದಾಗ ಅಲ್ಲಿಯೆ ಇದ್ದ ಕುರ್ಚಿಯ ಮೇಲೆ ಅರ್ಧಗಂಟೆಯ ಕಾಲ ಒರಗುತ್ತಿದ್ದನು. ಎಚ್ಚರವಾದಾಗ ಅವನ ಮನಸ್ಸು ಹೊಸ ಉತ್ಸಾಹದಿಂದ ಕೂಡಿರುತ್ತಿತ್ತು. ಅನಂತರ ಕೆಲಸ ಮುಂದುವರಿಯುತ್ತಿತ್ತು. ಹೀಗೆಯೇ ಸಾಗಿತು ಅವನ ಅರ್ಧ ಶತಮಾನದ ಜೀವನ.

ನ್ಯೂಯಾರ್ಕಿಗೆ ಬಂದ ಮೇಲೆ ಎಡಿಸನ್ ತನ್ನ ತಾಯಿ ತಂದೆಗಳಿಗೆ ಕಾಗದ ಬರೆದಿರಲಿಲ್ಲ, ತನಗೆ ಪ್ರಾಪ್ತವಾದ ಉತ್ತಮ ಸ್ಥಿತಿಯನ್ನು ಕೇಳಿ ಅವರಲ್ಲದೆ ಮನಃಪೂರ್ವಕವಾಗಿ ಸಂತೋಷ ಪಡುವವರು ಯಾರು? ತಾನು ನ್ಯೂಯಾಕಿಗೆ ಬಂದ ಬಳಿಕ ನಡೆದ ಸಂಗತಿಗಳೆಲ್ಲವನ್ನೂ ವಿವರಿಸಿ "ನೀನು ಹೆಚ್ಚಿನ ತೊಂದರೆಯನ್ನು ತೆಗೆದುಕೊಳ್ಳಬೇಡ. ಕಷ್ಟಕರವಾದ ಕೆಲಸವನ್ನು ಮಾಡಬೇಡ. ತಾಯಿಗೆ ಬೇಕಾದುದನ್ನು ತಂದು ಕೊಡು. ಹಣಕ್ಕಾಗಿ ಹಿಂಜರಿಯಬೇಕಾದ್ದಿಲ್ಲ. ಎಷ್ಟು ಹಣ ಬೇಕಾದರೂ ನಾನು ಒದಗಿಸಿ

ಕೊಡುತ್ತೇನೆ ನನಗೆ ಇಲ್ಲಿ ಮೈತುಂಬ ಕೆಲಸವಿದೆ. ಸ್ವಂತ ಪ್ರಯೋಗಶಾಲೆಯನ್ನು ತೆರೆದಿದ್ದೇನೆ. ಇದರಲ್ಲಿ ಹಲವು ಜನರು ಕೆಲಸ ಮಾಡುತ್ತಿದ್ದಾರೆ. ಇದೆಲ್ಲವೂ ನಿಮ್ಮ ಶಿಕ್ಷಣ ಮತ್ತು ಆಶೀರ್ವಾದದ ಫಲ" ಎಂದು ತಂದೆಗೆ ಕಾಗದ ಬರೆದನು. ಅವನು ಬರೆಯದೆ ಬಿಟ್ಟ ಮಾತು ಒಂದಿತ್ತು; ನಾನು ಇಲ್ಲಿ ನಿದ್ರಾಹಾರಗಳನ್ನು ಗಮನಿಸದೆ ಇಪ್ಪತ್ತುನಾಲ್ಕು ಗಂಟೆಗಳೂ ದುಡಿಯುತ್ತಿದ್ದೇನೆ ಎಂಬುದು.

ಸಂಶೋಧನೆಗಳ ಬಗ್ಗೆ, ಯುದ್ಧ ಯಂತ್ರಗಳನ್ನು ಅಭಿವೃದ್ಧಿಪಡಿಸುವ ವಿಚಾರವಾಗಿ ಅವನ ಮನಸ್ಸಿನಲ್ಲಿ ಹೊಸ ಹೊಸ ವಿಚಾರಗಳು ಧಾರಾಕಾರವಾಗಿ ಹಾದು ಹೋಗುತ್ತಿದ್ದವು. ಹಾಗೆ ಹೊಳೆದ ಪ್ರತಿಯೊಂದು ವಿಚಾರವನ್ನೂ ಪ್ರಯೋಗಮಾಡಿ ಸೂಕ್ತವಾಗಿ ಕಂಡರೆ ಅದನ್ನು ಆಚರಣೆಗೆ ತರುತ್ತಿದ್ದನು. ಒಮ್ಮೆ ಅವನು ಒಟ್ಟಿಗೆ ನಲವತ್ತೈದು ಸಂಶೋಧನೆಗಳನ್ನು ಏಕಕಾಲದಲ್ಲಿ ನಡೆಸಿದ್ದುಂಟು.

(ಮೂಲ: ಶ್ರೀ ಆರ್. ವಿ. ಕುಮಾರ್ ಬರೆದಿರುವ ಥಾಮಸ್ ಆಲ್ವ ಎಡಿಸನ್ ಪುಸ್ತಕದಿಂದ ಸಂಗ್ರಹ)

* * *

ಒಬ್ಬನ ತಾಯಿ ಸಾವಿನ ದವಡೆಯಲ್ಲಿ ಇರುವಾಗ ಆತ ಏನೂ ಮಾಡಲಾಗದೆ ಅಸಹಾಯಕನಾಗಿರುವುದೆಂದರೆ ಏನೆಂಬುದನ್ನು ತಿಳಿದಿದ್ದೇನೆ. ಇದಕ್ಕೆ ಯಾವ ಸಮಾಧಾನವೂ ಇಲ್ಲ. ಬದುಕಿನ ಒಂದು ಖಚಿತ ಅಂಶ ಸಾವು. ನಾವೆಲ್ಲರೂ ಇದರ ಮೂಲಕ ಹಾಯಲೇ ಬೇಕು.

ನಮ್ಮ ಮಕ್ಕಳಲ್ಲಿಯೂ, ಯುವ ಪೀಳಿಗೆಯಲ್ಲಿಯೂ ಬದುಕಿರಬಲ್ಲೆವಾದರೆ ನಮಗೆ ಸಾವೆಂಬುದು ಕೊನೆಯಲ್ಲ. ಏಕೆಂದರೆ ನಾವೇ ಅವರು. ಜೀವನ ವೃಕ್ಷದಲ್ಲಿ ಬಾಡಿದ ಎಲೆಗಳು ಮಾತ್ರ ನಮ್ಮ ದೇಹಗಳು.

–ಐನ್‌ಸ್ಟೈನ್

ಪುರಸೊತ್ತಿನ ಹವ್ಯಾಸಗಳು

–ಎ. ಕೃಷ್ಣಮೂರ್ತಿ

ಬೆಳಗ್ಗೆ ಹಾಸಿಗೆಯಿಂದ ಎದ್ದೊಡನೆ ಈ ದಿನ ಏನು ಮಾಡಬೇಕೆಂದು ಯೋಚಿಸುವ ಪರಿಸ್ಥಿತಿಯೇ ಇರುವುದಿಲ್ಲ. ದಿನಚರಿ ಸಿದ್ಧವಾಗಿಯೇ ಇರುತ್ತದೆ. ಅದು ಯಾಂತ್ರಿಕವಾಗಿ ನಡೆಯುತ್ತದೆ. ಅದು ನಮ್ಮ ಇಚ್ಛೆಗೆ ಬಿಟ್ಟಿದ್ದಲ್ಲ. ಬಾಳ್ವೆಯನ್ನು ಸಾಗಿಸಲು ಅದು ಅವಶ್ಯಕ. ಮನಸ್ಸಿಲ್ಲದಿದ್ದರೂ ಮೈಮುರಿಯುವಂತೆ ದುಡಿಯಬೇಕು. ಬಲವಂತ ಮಾಘ ಸ್ನಾನವಾದರೂ ಅಗತ್ಯ. ಅಪ್ರಿಯವಾದರೂ ಅನಿವಾರ್ಯ. ವಿದ್ಯಾರ್ಥಿಗೆ ಪಠ್ಯಪುಸ್ತಕ ಕಬ್ಬಿಣದ ಕಡಲೆಯಂತಿದ್ದರೆ ಅದನ್ನು ಓದದೆ ಉಪೇಕ್ಷೆ ಮಾಡುವುದು ಸಾಧ್ಯವೇ? ಓದಿ ಸಾಧ್ಯವಾದಷ್ಟು ಅರಗಿಸಿಕೊಳ್ಳಬೇಕು. ಮೂಲೆ ಮೂಲೆಗಳಿಂದ ಹುಡುಕಿ ಕೇಳುವ ಪ್ರಶ್ನೆಗಳಿಗೆ ಉತ್ತರ ಬರೆಯಲು ಸಿದ್ಧನಾಗಬೇಕು. ಹೀಗೆ ಒಂದು ಉದ್ದೇಶದಿಂದ ಮಾಡುವ ಕೆಲಸದಲ್ಲಿ ಆನಂದಕ್ಕೆ ಎಡೆಯಿಲ್ಲ. ಏನೋ ಒಂದು ಆತಂಕ ನಮ್ಮನ್ನು ಆವರಿಸಿಕೊಳ್ಳುತ್ತದೆ. ಕಾದಂಬರಿ ಸೊಗಸಾಗಿಯೇ ಇರಬಹುದು. ಆದರೆ ಅದು ಪಠ್ಯಪುಸ್ತಕವಾದಾಗ ಆ ಸೊಗಸಿಗೆ ಪ್ರಾಧಾನ್ಯತೆಯಿಲ್ಲ. ಪಾತ್ರರಚನೆ, ಕಥಾ ಸಂವಿಧಾನ, ಕಾದಂಬರಿಕಾರನ ಜೀವನ ಚರಿತ್ರೆ, ಸಂಸಾರದ ಹಿನ್ನೆಲೆ ಇತ್ಯಾದಿಗಳನ್ನು ತಿಳಿದು ನೆನಪಿಟ್ಟುಕೊಳ್ಳಲು ತಲೆಕೆಡಿಸಿಕೊಳ್ಳುತ್ತೇವೆ.

ಹಾಗೆಯೇ ನಮ್ಮಲ್ಲಿರುವ ವಸ್ತುಗಳು ನಮಗೆ ಚೆನ್ನಾಗಿ ಕಾಣಿಸುವುದಿಲ್ಲ. ಇತರರಲ್ಲಿರುವ ಪದಾರ್ಥಗಳು ಚೆನ್ನಾಗಿ ಕಾಣಿಸುತ್ತವೆ. ನಮ್ಮ ಕೆಲಸ ನಮಗೆ ರುಚಿಸದು. ಉಪಾಧ್ಯಾಯನಾದವನಿಗೆ "ಗುಮಾಸ್ತನಾದರೆ ಸುಖ. ಬಂದ ಕಾಗದದ 'ಮೇಲೆ ತೋಚಿದ ನಾಲ್ಕು ಪಂಕ್ತಿ ಗೀಚಿದರೆ ಆಯಿತು. ಹುಡುಗರು ಬರೆದ ಅಪದ್ಧವನ್ನೆಲ್ಲಾ ಶ್ರವಣ ಮಾಡಿಕೊಂಡು ಅವರ ಮುಂದೆ ತಲೆ ಚಚ್ಚಿಕೊಳ್ಳಬೇಕಾಗಿಲ್ಲ" ಎನ್ನಿಸುತ್ತದೆ. ಆದರೆ ಒಬ್ಬ ಗುಮಾಸ್ತನನ್ನು ವಿಚಾರಿಸಿ ನೋಡಿ: "ಉಪಾಧ್ಯಾಯರಿಗೇನು ಕೇಡು? ಹೇಗೂ ವಾರಕ್ಕೆರಡು ದಿನ ರಜ; ಇವತ್ತು ಗೌರಿ ಹಬ್ಬ, ನಾಳೆ ಶುಭಶುಕ್ರವಾರ ಅಂತ. ಆಗ ಶಾಲೆಯಿಲ್ಲ; ಇದು ಸಾಲದು ಅಂತ ಬೇಸಿಗೆ, ದಸರಾ, ಕ್ರಿಸ್ಮಸ್ ಅಂತ ಸ್ಕೂಲು ಮುಚ್ಚಿಬಿಟ್ಟು ಹಾಯಾಗಿ ಮನೇಲಿ ಕೂತ್ಕೊಂಡು ಸಂಬಳ ತಿನ್ನಬಹುದು" ಎನ್ನುತ್ತಾನೆ. ವ್ಯಾಪಾರಿಯ ಉದ್ಯೋಗವನ್ನು ಕುರಿತು ಆ ಎರಡು ವರ್ಗದವರೂ ಅಸೂಯೆ ಪಡುತ್ತಾರೆ. ಹಾಗನ್ನಿಸುವುದು ಸ್ವಾಭಾವಿಕವೇ. ಏಕೆಂದರೆ ನಾವು ಮಾಡುವ ವೃತ್ತಿ ನಮಗೆ ಕೆಲಸ. ಇತರರಿಗೆ ಅದರಲ್ಲಿ ಸ್ವಾರಸ್ಯ ಕಾಣುತ್ತದೆ. ದೂರದ ಬೆಟ್ಟ ನುಣ್ಣಗೆ ತಾನೇ ಕಾಣಿಸುವುದು?

ದಿನ ನಿತ್ಯವೂ ಬರೀ ದುಡಿಮೆಯೇ ಆದರೆ ಮನಸ್ಸಿಗೆ ವಿಶೇಷವಾಗಿ

ಆಯಾಸವುಂಟಾಗುತ್ತದೆ. ಮನಸ್ಸಿಗೂ ಪುರಸೊತ್ತು ಬೇಕು. ದಿನಚರಿಯಿಂದ ದೂರವಾಗಿ ಬೇರೇನಾದರೂ ಕೆಲಸದಲ್ಲಿ ತೊಡಗುವುದಾದರೆ ಆಗಸ ಬೇಸರ, ದುಗುಡ ದೂರ ವಾಗುತ್ತದೆ. ಅಂತಹ ಕೆಲಸ ಕಡ್ಡಾಯವಲ್ಲವಾದುದರಿಂದ ದೇಹಕ್ಕೆ ಶ್ರಮವಾದರೂ ಅದು ತೋರುವುದಿಲ್ಲ. ಮನಸ್ಸಿನಲ್ಲಿ ಒಂದು ರೀತಿಯ ಉತ್ಸಾಹವಿರುತ್ತದೆ. ಇತರರ ಕಣ್ಣಿಗೆ ಅದು ವಿಚಿತ್ರವಾಗಿಯೇ ಕಾಣಿಸಬಹುದು. ಆದರೆ ನಮಗೆ ಅದು ಪ್ರಿಯವಾಗಿರುತ್ತದೆ. ಮನಸ್ಸನ್ನು ಹಗುರಮಾಡಲು ನೆರವಾಗುವ ಆ ಬಗೆಯ ಹವ್ಯಾಸಗಳು ಕೆಲವನ್ನು ನಾವು ನೆನಪಿಗೆ ತಂದುಕೊಳ್ಳಬಹುದು.

ಕೆಲವು ವೇಳೆ ಪುರಸೊತ್ತಿದ್ದಾಗ ಜಡತ್ವ ನಮ್ಮನ್ನು ಸಂಪೂರ್ಣವಾಗಿ ಆವರಿಸಿಕೊಳ್ಳುತ್ತದೆ. ಘಳಿಗೆಗೆ ಮೂರು ವೇಳೆ ಮೈಮುರಿಯುತ್ತೇವೆ. ಬಾಯಿಬಿರಿಯುವಂತೆ ಆಕಳಿಸುತ್ತೇವೆ. ಸ್ವಲ್ಪ ಹೊತ್ತು ಹೊರಳಾಡಿದ ಮೇಲೆ ನಿದ್ದೆ ಬರುವುದೂ ಉಂಟು. ಒಂದೆರಡು ಗಂಟೆಗಳ ಕಾಲ ಇಹಲೋಕದ ವ್ಯಾಪಾರವನ್ನೇ ತೊರೆದು ಸಮಾಧಿಸ್ಥರಾಗಿದ್ದ ಮೇಲೆ ಇದ್ದಕ್ಕಿದ್ದ ಹಾಗೆಯೇ ಎಚ್ಚರವಾಗುತ್ತದೆ. ಮಧ್ಯಾಹ್ನವೇ ಆಗಿದ್ದರೂ ರಾತ್ರಿ ಕಳೆದು ಬೆಳಗಾಗಿರಬೇಕೆಂಬ ಭ್ರಮೆಯಿಂದ ನೇರವಾಗಿ ಬಚ್ಚಲು ಮನೆಗೆ ಹೋಗಿ ಹಲ್ಲುಜ್ಜಲು ಪ್ರಾರಂಭಿಸುತ್ತೇವೆ. ಕ್ರಮೇಣ ಸುತ್ತಿನ ಸನ್ನಿವೇಶ ಜನರ ಓಡಾಟಗಳನ್ನು ಗಮನಿಸಿ ವಾಸ್ತವ ಪ್ರಪಂಚಕ್ಕೆ ಹೊಂದಿಕೊಳ್ಳುವುದು ಸಾಧ್ಯವಾಗುತ್ತದೆ.

ಪ್ರಯತ್ನಿಸಿದರೂ ಕೆಲವು ವೇಳೆ ನಿದ್ದೆ ಬರುವುದಿಲ್ಲ. ಮನಸ್ಸು ನಮ್ಮನ್ನು ಬೇಡದ ಕೆಲಸದ ಕಡೆಗೇ ಎಳೆಯುತ್ತದೆ. ಆ ಕೆಲಸಗಳನ್ನು ಮಾಡ ತೊಡಗುವುದೇನೂ ಸುಲಭವಲ್ಲ, ಅನೇಕ ಅಡ್ಡಿ ಆತಂಕಗಳು ಬರುತ್ತವೆ. 'ಏನು ಮಾಡುವುದಕ್ಕೆ ಹೊರಟಿರಿ? ಸಧ್ಯ ಸುಮ್ಮನಿರಿ' ಎಂದು ಮನೆಯವರು ಅಪಶಕುನ ನುಡಿಯುತ್ತಾರೆ. ಆದರೆ ನಾವು ಸೋಲೊಪ್ಪದೆ ಮುಂದುವರೆಯುತ್ತೇವೆ. ಅನೇಕ ವೇಳೆ ಹೀಗೆ ಹಟಮಾರಿತನದಿಂದ ಮುನ್ನುಗ್ಗಿ ಕೈಕಾಲು ಮುರಿದುಕೊಳ್ಳುವುದೂ ಉಂಟು. ಆದರೆ ಅಂತಹ ಅವಘಡದಿಂದೊದಗುವ ಯಾತನೆ ಸಹ್ಯವೆನಿಸುತ್ತದೆ. ಸ್ವಲ್ಪ ಹೊತ್ತು ಕಳೆದ ಮೇಲೆ ನಮಗೆ ನಗು ಬರುತ್ತದೆ. 'ಏನು ಈ ಹುಚ್ಚು?' ಎಂದುಕೊಳ್ಳುತ್ತೇವೆ.

ಪುರುಸೊತ್ತಿದ್ದಾಗ ಬಗೆ ಬಗೆಯ ಚಪಲಗಳು ನಮ್ಮನ್ನು ಕಾಡುತ್ತವೆ. ಏನಾದರೂ ಪುಡಿ ತಿಂಡಿ ತಿಂದು ಬಾಯಾಡಿಸಬೇಕೆಂಬುದೂ ಅಂತಹ ಒಂದು ಚಪಲ. ಮದ್ಯಾಹ್ನ ಊಟವಾದ ಮೇಲೆ ಬೆಳಗಿನಿಂದ ದುಡಿದ ಹೆಂಗಸರು ಒಂದು ಘಳಿಗೆ ವಿಶ್ರಾಂತಿ ಪಡೆಯಲು ದಿಂಬುಗಳನ್ನು ಆಶ್ರಯಿಸುತ್ತಾರೆ. ಅವರನ್ನು ಏಕೆ ತೊಂದರೆ ಪಡಿಸಬೇಕೆಂದೋ ಅಥಾವ ಕೇಳಲು ಹಿಂದೇಟು ಹೊಡೆದೋ, ಅವರಿಗೆ ತಿಳಿಯದಂತೆ ಮೆಲ್ಲನೆ ಪಾಕಶಾಲೆ ಪ್ರವೇಶಿಸಿ ಕುರುಕಲು ತಿಂಡಿಗಾಗಿ ಬೇಟೆಯಾಡಲು ಹೊರಡುತ್ತೇವೆ. ಆಗ ನಮ್ಮ ಸ್ಥಿತಿ ಕಣ್ಣುಕಟ್ಟಿ ಕಾಡಿಗೆ ಬಿಟ್ಟಂತಾಗುತ್ತದೆ. ಸಂಸಾರ

ಹೂಡಿದ ಹೊಸದರಲ್ಲಿ ಮನೆಯಾಕೆ ಉತ್ಸಾಹದಿಂದ ಡಬ್ಬಗಳಿಗೆಲ್ಲಕ್ಕೂ ಒಂದೊಂದು ಚೀಟಿ ಅಂಟಿಸಿ ಅದಕ್ಕೆ ತಕ್ಕಂತೆ ಸಾಮಾನುಗಳನ್ನು ತುಂಬಿಡುತ್ತಾಳೆ. ಆದರೆ ಕಾಲ ಸವೆದಂತೆ ಹೊಗೆ ಹಿಡಿದು ಚೀಟಿಗಳು ಮಂಕಾಗುತ್ತವೆ; ಅಥವಾ ಹವಾಗುಣಕ್ಕೆ ಬಲಿಯಾಗಿ ಉದುರಿಹೋಗಿರುತ್ತವೆ. ಮನೆಯಾಕೆಗೂ ಮುಂಚಿನ ಉತ್ಸಾಹವಿರುವುದಿಲ್ಲ. ಯಜಮಾನರು ಸಾಮಾನು ತಂದು ಹಾಕಿದಾಗ ಯಾವುದೊ ಖಾಲಿಯಾಗಿದ್ದ ಡಬ್ಬಕ್ಕೆ ತುಂಬಿರಿಸಿಬಿಡುತ್ತಾಳೆ. ಆದರೆ ಒಂದೂಂದು ಚೀಟಿ ಚೆನ್ನಾಗಿ ಡಬ್ಬಕ್ಕೆ ಅಂಟಿಕೊಂಡಿದ್ದು ನಮ್ಮನ್ನು ಅಣಕಿಸುತ್ತವೆ. 'ಹುರಿಗಾಳು' ಎಂಬ ಹಣೆಯ ಬರಹ ಇರುವ ಡಬ್ಬವನ್ನು ಕಂಡು ನಮ್ಮ ಬಾಯಿ ನೀರೂರುತ್ತದೆ. ಆದರೆ ಆ ಡಬ್ಬವೋ ಸುಲಭವಾಗಿ ತೆಗೆಯಲುಬಾರದು. ಒಂದು ಚಮಚ ಅಥಾವ ಪಾಕಶಾಲೆಯ ಮತ್ತಾವುದಾದರೂ ಆಯುಧದಿಂದ ಮುಚ್ಚುಳ ತೆಗೆದು ಡಬ್ಬದೊಳಕ್ಕೆ ಕೈಹಾಕಿದರೆ ಅಲ್ಲಿ ಸಿಕ್ಕುವುದೇನು? ಮೆಣಸಿನಕಾಯಿಯೋ, ಸಾಸಿವೆಯೋ ಇರುತ್ತದೆ. ಎಂಥ ಆಶೆ! ಎಷ್ಟು ಶ್ರಮ! ಎಂಥ ಆಶಾಭಂಗ! ಆದರೆ ಹಿಂದಕ್ಕೆ ಸರಿಯಲು ಮನಸ್ಸು ಒಗ್ಗದು. ಸಂಶೋಧನೆ ಮುಂದುವರಿಸಿ ಕೊನೆಗೆ ಚೂರು ಕೊಬ್ಬರಿಯನ್ನಾದರೂ ತಿಂದು ಹೊರಗೆ ಬರುತ್ತೇವೆ.

ಒಮ್ಮೊಮ್ಮೆ ವಿಚಿತ್ರವಾದ ಬಿಕ್ಕಟ್ಟಿನ ಪ್ರಸಂಗಗಳೂ ಬರುವುದುಂಟು. ನಾವು ಮನೆಗೆ ಯಜಮಾನರಾಗಿದ್ದರೆ ತಾನೇ ಏನು? ಪಾಕಶಾಲೆಯ ಯಜಮಾನಿಕೆ ಮನೆಯಾಕೆಯದು ತಾನೆ? ಅವಳಿಗೆ ತಿಳಿಯಬಾರದೆಂದುಕೊಂಡು ಎಚ್ಚರಿಕೆಯಿಂದ ಅವರ ಕಾರ್ಯಕ್ಷೇತ್ರಕ್ಕೆ ಅವರಿಲ್ಲದ ಸಮಯದಲ್ಲಿ ಪ್ರವೇಶಿಸುತ್ತೇವೆ. ನಾವು ಎಚ್ಚರ ಹೆಚ್ಚು ಮಾಡಿದಷ್ಟೂ ಆಭಾಸವಾಗುವುದೂ ಹೆಚ್ಚು. ಡಬ್ಬವೋ ಅಥವಾ ಅದರ ಮುಚ್ಚಳವೋ ಕೈಜಾರಿ ನೆಲಕ್ಕೆ ಬಿದ್ದುಬಿಟ್ಟರೆ ಸಾಕು. ಇಲಿಯೋ ಬೆಕ್ಕೋ ನುಗ್ಗಿ ಹಾವಳಿ ಮಾಡುತ್ತಿರಬೇಕೆಂದುಕೊಂಡು ನಿದ್ರಾಭಂಗವಾದ ಮನೆಯಾಕೆ ಕೋಪದಿಂದ ಕೋಲು ಹಿಡಿದು ಅಡುಗೆಯ ಮನೆಯನ್ನು ನುಗ್ಗಿದಾಗ, ನಾವು ಎಂದು ತಿಳಿದಮೇಲೆ ಅವರ ಸ್ಥಿತಿಯನ್ನು ಕೊಂಚ ಊಹಿಸಿ.

ಈ ಸಂದರ್ಭದಲ್ಲಿ ನಮ್ಮ ಮನೆಯಲ್ಲಿರುವ ಮತ್ತೊಂದು ವಿಶೇಷ ಪರಿಸ್ಥಿತಿಯನ್ನೂ ತಿಳಿಸಬಹುದು. ಸುಮಾರು ಎಂಭತ್ತು ವಯಸ್ಸು ಮೀರಿದ ನಮ್ಮ ಅಜ್ಜಿ ಮನೆಯಲ್ಲಿದ್ದಾರೆ. ಅವರಿಗೆ ಕಣ್ಣು ಕಾಣಿಸುವುದಿಲ್ಲ. ಮನೆಯ ಉಗ್ರಾಣವೇ ಅವರ ಮುಖ್ಯ ನೆಲೆ. ಈ ಉಗ್ರಾಣ ಅಡಿಗೆಮನೆಯ ಎದುರಿಗೇ ಇರುವುದರಿಂದ ಅಡಿಗೆಯ ಕೋಣೆಗೆ ಅವರದು ಸರ್ಪಕಾವಲು. ಹೊತ್ತಲ್ಲದ ಹೊತ್ತಿನಲ್ಲಿ ಯಾರು ಅಲ್ಲಿಗೆ ಬಂದರೂ ಕಾಲು ಸಪ್ಪಳ ಕೇಳಿ ಪತ್ತೆ ಮಾಡುತ್ತಾರೆ. ಮಕ್ಕಳೆಲ್ಲಿ ನುಗ್ಗಿ ಮುಚ್ಚಿಟ್ಟ ಪದಾರ್ಥಗಳನ್ನು ಮುಟ್ಟಿ ಮಡಿಗೆ ಭಂಗ ತರುವರೋ ಎಂಬ ಚಿಂತೆ ಅವರಿಗೆ. ಅದರಲ್ಲೂ ಹಬ್ಬ ಹರಿದಿನಗಳ ಹಿಂದಿನ ದಿನ–ಮರುದಿನ ನೈವೇದ್ಯಕಾಗಿ–ಉಪವಾಸದಲ್ಲಿ ನಿಯಮಬದ್ಧವಾಗಿ ಮಾಡಿ ಮುಚ್ಚಿಟ್ಟ ಭಕ್ಷ್ಯಗಳನ್ನು ಈ ಮಕ್ಕಳೆಲ್ಲಿ ರುಚಿ ನೋಡಿಬಿಡುವರೋ ಎಂಬ ಆತಂಕ ಇದ್ದೇ ಇರುತ್ತದೆ.

ನಮ್ಮಂಥ ದೊಡ್ಡವರು, ಸರಿತಪ್ಪುಗಳ ವಿವೇಚನೆಯುಳ್ಳವರು, ಅಡಿಗೆ ಮನೆಗೆ ನುಗ್ಗಿ ದಾಂಧಲೆ ಮಾಡಿಯಾರೆಂಬ ಅನುಮಾನ ಅವರಿಗೆ ಹೇಗೆ ತಾನೇ ಬಂದೀತು? ಆದ್ದರಿಂದ ಕಾಲು ಸಪ್ಪಳವಾಯಿತೆಂದರೆ ಬಂದವರು ಮಕ್ಕಳೇ ಇರಬೇಕೆಂದು ನಿಶ್ಚಯಿಸಿಕೊಂಡು "ಯಾರೋ ಅದು? ಮೆಲ್ಲಗೆ ನುಗ್ಗಿದೆಯಾ ಅಡಿಗೆ ಮನೆಗೆ? ಕಳ್ಳ" ಎಂದು ಗದರಿಸಿ "ತಡಿ ಅವಳನ್ನ ಕರೀತಿನಿ" ಎಂದು ಹೆದರಿಸುವುದೂ ಉಂಟು. ನಮಗೆ ಆ ಅಸ್ತ್ರ ಪ್ರಯೋಗವಾದಾಗ, ಅವಳನ್ನು ಕರೆಯುವುದಾಗಿ ಬೆದರಿಸಿದಾಗ ಪರಿಸ್ಥಿತಿ ಹೇಗಿರಬಹುದು? ಅದೂ ಒಂದು ರಸನಿಮಿಷ. ಪ್ರಸಂಗವನ್ನು ನೆನೆದುಕೊಂಡು ಮನೆಯವರೆಲ್ಲರೂ ಆನಂದಪಡಬಹುದು.

ಪುರಸೊತ್ತಿದ್ದಾಗ ಪಾಕಶಾಲೆಯಲ್ಲಿ ಪ್ರಯೋಗ ನಡೆಸಿ ತಿನಿಸುಗಳನ್ನು ಕುರಿತು ಹೊಸ ಸಂಶೋಧನೆಗಳನ್ನು ನಡೆಸುವ ಹವ್ಯಾಸ ನನಗೆ ಬಲು ಪ್ರಿಯವಾದುದು. ತಿಂಗಳಲ್ಲಿ ಮೂರು ದಿನದ ಮಟ್ಟಿಗೆ ಪಾಕಶಾಲೆಯ ಪ್ರವೇಶಕ್ಕೆ ಕರೆ ಬಂದಾಗ ಹೇಳಲಾರದಷ್ಟು ಕೋಪ ಬರುತ್ತದೆ. ಮನೆಯವರ ಮೇಲೆಲ್ಲಾ ರೇಗಿ ಬೀಳಬೇಕೆನಿಸುತ್ತದೆ. ಅಂತೂ ಗೊಣಗಿಕೊಂಡು ಈ ಮೂರು ದಿನ ಬದುಕನ್ನು ತಳ್ಳುತ್ತೇನೆ. ಅನ್ನ ಸಾರು ಮಾಡಿ ಬಡಿದು ಮನೆಯವರ ಮೇಲೆ ಸೇಡು ತೀರಿಸಿಕೊಳ್ಳುತ್ತೇನೆ. ಆದರೆ ನಾವಾಗಿಯೇ ಹುಚ್ಚೆದ್ದು ಪಾಕಸೃಷ್ಟಿಗೆ ತೊಡಗಿದಾಗ ಅನಿರ್ವಚನೀಯವಾದ ಆನಂದ; ಮಿತಿಮೀರಿದ ಉತ್ಸಾಹ. ಆದರೆ ಅಂತಹ ಸಂದರ್ಭಗಳಲ್ಲಿ ನಮ್ಮ ಮನೋರಮೆಯರು ನಮ್ಮನ್ನು ಪಾಕಶಾಲೆಗೆ ಸ್ವಾಗತಿಸಿಯಾರೇ? ಮುಖ ಸೊಟ್ಟ ಮಾಡಬಹುದು; ಹುಬ್ಬುಗಂಟಿಕ್ಕಬಹುದು. 'ಸಾಕು, ನಿಲ್ಲಿಸಿ. ಆ ಹರದ ತೆಗೆಯುವ ಹೊತ್ತಿಗೆ ನನ್ನ ಪ್ರಾಣಹೋಗುತ್ತೆ' ಎಂದು ರೇಗಾಡಬಹುದು. ಆ ಬೆದರಿಕೆಗಳಿಗೆಲ್ಲಾ ಸೋಲದೆ ಮುಂದುವರಿದರೆ 'ಏನಾದರೂ ಮಾಡಿಕೊಳ್ಳಿ ಹೋಗಿ, ನೀವೇನು ಎಳೆಯ ಮಕ್ಕಳೆ?' (ಹೀಗೆ ನಮ್ಮ ವಯಸ್ಸನ್ನೂ ನೆನಪು ಮಾಡಿಕೊಟ್ಟು) ಎಂದು ಬೇಸರದಿಂದ ಸುಮ್ಮನಾಗುತ್ತಾರೆ.

ಈ ಪಾಕಶಾಸ್ತ್ರ ಸಂಶೋಧನೆಗೆ ನಾವು ಹೊರಟಾಗ ಮನೆಯ ಹೆಂಗಸರು ಏಕೆ ಅಡ್ಡಿ ಮಾಡುತ್ತಾರೆಂದು ಆಗ ಯೋಚಿಸುತ್ತೇನೆ. ಓರಣವಾಗಿರುವ ಅಡಿಗೆಯ ಮನೆ ನಮ್ಮ ಕೈವಾಡದಿಂದ ಹದಗೆಡುವುದೆಂಬ ಅವರ ವಾದವೇನೋ ನ್ಯಾಯವಾದದ್ದೇ ಸರಿ. ಆದರೆ ಅದಕ್ಕೂ ಮಿಗಿಲಾದ ಕಾರಣವೇನೆಂದರೆ ಅವರಲ್ಲಿರುವ ಒಂದು ವಿಚಿತ್ರ ಭಯ. ನಾವು ನಡೆಸುವ ಪ್ರಯೋಗ ಯಶಸ್ವಿಯಾಗಿ ಒಂದು ಮಹಾ ರುಚಿಕರವಾದ ತಿನಿಸು ಸಿದ್ಧವಾದರೆ ಅದರಿಂದ ಬರುವ ಕೀರ್ತಿ ಗಂಡಸು ಜಾತಿಗೇ ತಾನೇ? ಅಂತಹ ಸಂದರ್ಭದಲ್ಲಿ ಸ್ತ್ರೀಯರಿಗೆ ಅಭಿಮಾನ ಭಂಗವಾದಹಾಗಾಗುತ್ತದಲ್ಲವೆ? ಅಷ್ಟೆ ಅಲ್ಲ; ಅದರಲ್ಲಿ ಇನ್ನೂ ಒಂದು ಸ್ವಾರಸ್ಯವಿದೆ. ಉದ್ಯೋಗದಲ್ಲಿ ಮೇಲುಗೈ ಆದರೆ ಹೆಂಗಸಿಗೆ ಬಡಾಯಿ ಹೆಚ್ಚು. ಇಲ್ಲದ ಬಿಂಕ ತೋರಿಸುತ್ತಾರೆ. ಹಾಗೇಯೇ ಗಂಡಸು ಅಡುಗೆಯಲ್ಲಿ ಮೇಲುಗೈ

ಆದರೆ ಅವನನ್ನು ಹಿಡಿಯುವುದು ಕಷ್ಟ. ಕೊಂಬು ಕಹಳೆ ಊದಿಸಿಕೊಂಡು ತನ್ನ ಕೈಚಳಕದ ವಿಷಯವಾಗಿ ಜಂಭ ಕೊಚ್ಚಿಕೊಳ್ಳುತ್ತಾನೆ. ನಳ, ಭೀಮಸೇನರ ಹೆಸರುಗಳನ್ನು ಹೇಳಿ ತಾನೂ ಅವರ ಪಂಕ್ತಿಗೆ ಸೇರಿದವನೆನ್ನುತ್ತಾನೆ. 'ಅನೂಚಾನವಾಗಿ, ಅನಾದಿಕಾಲದಿಂದಲೂ ಅಡಿಗೆ ತಮ್ಮ ಆಜನ್ಮ ಸಿದ್ಧವಾದ ಹಕ್ಕು, ತಮ್ಮ ಮುಖ್ಯ ಕಾರ್ಯರಂಗವೇ ಪಾಕಶಾಲೆ; ಆದರೆ ಅದಕ್ಕಿಂತ ಹೆಚ್ಚು ಕಷ್ಟತರವಾದ ಕೆಲಸದಲ್ಲಿ ತೊಡಗಬೇಕಾಗಿರುವುದರಿಂದ ಗಂಡಸು ಈ ಅಡಿಗೆಯ ಕೆಲಸವನ್ನು ಹೆಂಗಸಿಗೆ ವಹಿಸಿಕೊಟ್ಟಿದ್ದಾನೆ' ಇತ್ಯಾದಿಯಾಗಿ ಪಾಪ, ಹೆಂಗಸರನ್ನು ಹಿಯಾಳಿಸುತ್ತಾನೆ. ಆದುದರಿಂದಲೇ ಇರಬೇಕು. ನಾವು ಪಾಕಶಾಲೆಯಲ್ಲಿ ನಮ್ಮ ಕೈಚಳಕ ತೋರಿಸಲು ಹೊರಟಾಗ ನಮ್ಮ ಹೆಂಗಸರು ಅಡ್ಡಿ ಮಾಡಲು ತೊಡಗುವುದು. ಆದರೆ-ಅವರ ಆರ್ಭಟಕ್ಕೆ ಹೆದರಿ ಸೋತವರುಂಟೆ? ಸೋತು ಬದುಕಿದವರುಂಟೆ?

ಹಟ ಹಿಡಿದು ಅಡುಗೆಯ ಮನೆಗೆ ಮುತ್ತಿಗೆ ಹಾಕಿ ಒಲೆಯ ಮುಂದೆ ಕುಳಿತು ಬೇಕಾದ ಸಾಮಗ್ರಿಗಳೆಲ್ಲವನ್ನೂ ಕೂಡಲೇ ತರಿಸಿಕೊಂಡು ವಿಶೇಷ ರೀತಿಯ ತಿನಿಸುಗಳನ್ನು ತಯಾರಿಸತೊಡಗಬೇಕು. ನಮ್ಮ ಪುಣ್ಯದಿಂದ ಆ ಪ್ರಯೋಗ ಯಶಸ್ವಿಯಾಯಿತೋ ಸರಿ; ಚತುರ್ಭುಜ ಮಾಡಿಕೊಂಡು ಬೆನ್ನು ತಟ್ಟಿಕೊಳ್ಳಬಹುದು. ಆದರೆ, ಅದೇನಾದರೂ ಕೆಟ್ಟುಹೋದರೆ ಆಳುದ್ದ ಶರೀರವನ್ನು ಗೇಣುದ್ದ ಮಾಡಿಕೊಂಡು ಮೌನವಾಗಿ ಅಲ್ಲಿಂದ ಹೊರಡಬೇಕಾಗುತ್ತದೆ. ಹೀಗೆ ಪುರಸೊತ್ತಿದ್ದಾಗ ಪಾಕಶಾಸ್ತ್ರ ವಿಜ್ಞಾನಿಯಾಗುವುದೂ ಕೆಲವರ ಒಂದು ಹವ್ಯಾಸ.

ದಿನ ನಿತ್ಯದ ನಮ್ಮ ಕೆಲಸ ಕೇವಲ ಫಲಾಪೇಕ್ಷೆಯಿಂದ ಮಾಡುವಂಥಾದ್ದು. ಅದಕ್ಕಾಗಿ ನಮ್ಮ ಬುದ್ಧಿ ಶಕ್ತಿಯನ್ನೆಲ್ಲಾ ಉಪಯೋಗಿಸುತ್ತೇವೆ. ದೇಹಶ್ರಮಪಡುತ್ತೇವೆ. ಆದರೆ ಆ ಕೆಲಸ ಮಾಡುವುದರಲ್ಲಿ ಸಂತೋಷವೇನೂ ಇಲ್ಲ. ನಿರ್ವಾಹವಿಲ್ಲದ ದುಡಿತ ಅದು. ಇಂತಹ ದುಡಿತ ಬೇಸರವಾದಾಗ ಒಮ್ಮೊಮ್ಮೆ ಮೇಲೆ ಹೇಳಿರುವಂತೆ ಯಾವುದಾದರೊಂದು ಹವ್ಯಾಸದಲ್ಲಿ ವಿಹರಿಸುವುದು ಹಿತಕರವಾದುದು. ಅದರಲ್ಲೂ ದೇಹಶ್ರಮವಿದೆ. ಬುದ್ಧಿ ಉಪಯೋಗಿಸುವುದು ಅಗತ್ಯ. ಆದರೆ ದಿನನಿತ್ಯದ 'ಮಾಮೂಲು' ಮಾರ್ಗದಿಂದ ಬೇರೆಯಾದುದರಿಂದ ನಮ್ಮ ಬೇಸರ ಹರಿದು ಹುರುಪು ಹುಟ್ಟುತ್ತದೆ. ಪರಿಣಾಮ ಹೇಗಾದರೂ ಸರಿ. ತೃಪ್ತಿಯುಂಟು; ಸಂತೋಷವುಂಟು.

ಅನೇಕ ವೇಳೆ ಇಂಥ ಕೆಲಸಗಳಿಂದಲೇ ನಿಜವಾದ ಪ್ರಯೋಜನವುಂಟು. ಅನಿರೀಕ್ಷಿತವಾಗಿ ದೊರೆಯುವ ಫಲ, ಆನಂದ ಸ್ವಚ್ಛವಾದುದು. ಅದಕ್ಕೆ ಬೆಲೆಯೂ ಹೆಚ್ಚು. ಆದುದರಿಂದಲೇ ಕೃಷ್ಣ ಗೀತೆಯಲ್ಲಿ ಹೇಳಿದ್ದು, "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ" ಎಂದು.

(ಸಾಭಾರ : ಗದ್ಯ ವಿಹಾರ)

ದಿಟದ ಸಂಶೋಧಕ ಡಾ. ಎಸ್. ಶ್ರೀಕಂಠಶಾಸ್ತ್ರಿ

-ಡಾ.ಎಚ್.ಎಸ್.ಗೋಪಾಲರಾವ್

ವಿಶ್ವದಲ್ಲಿ ಅನೇಕ ಸಂಶೋಧಕರು ಇದ್ದರು ಮತ್ತು ಇದ್ದಾರೆ; ಮುಂದೆಯೂ ಇರುತ್ತಾರೆ. ಆದರೆ ಕೆಲವು ಸಂಶೋಧಕರು 'ಭುವನದ ಭಾಗ್ಯ' ಎಂಬಂತೆ ಕಾಣುತ್ತಾರೆ. ಅಂತಹ ಅಪರೂಪದ ಸಂಶೋಧಕರಲ್ಲಿ ಡಾ॥ ಎಸ್.ಶ್ರೀಕಂಠಶಾಸ್ತ್ರಿ ಒಬ್ಬರು.

ಕರ್ನಾಟಕ ಮಾತ್ರವಲ್ಲದೆ ಭಾರತೀಯ ಹಾಗೂ ಪ್ರಪಂಚ ಇತಿಹಾಸದಲ್ಲಿ ಅದ್ವಿತೀಯ ಪಾಂಡಿತ್ಯ ಪಡೆದಿದ್ದ ಇತಿಹಾಸ ತಜ್ಞ ಸೊಂಡೇಕೊಪ್ಪದ ಡಾ॥ ಎಸ್.ಶ್ರೀಕಂಠಶಾಸ್ತ್ರಿ. ೧೯೦೪ ನವೆಂಬರ್ ೫ ರಂದು ನಂಜನಗೂಡಿನಲ್ಲಿ ಜನಿಸಿದ ಡಾ॥ ಎಸ್.ಶ್ರೀಕಂಠಶಾಸ್ತ್ರಿ ಗಳು, ತಮ್ಮ ೨೧ನೆಯ ವಯಸ್ಸಿನಲ್ಲೇ ಜರ್ನಲ್ ಆಫ್ ದಿ ರಾಯಲ್ ಏಷ್ಯಾಟಿಕ್ ಸೊಸೈಟಿ ಆಫ್ ಗ್ರೇಟ್ ಬ್ರಿಟನ್ ಅಂಡ್ ಐರ್ಲೆಂಡ್‌ನ ೧೯೨೬ನೆಯ ವರ್ಷದ ಸಂಚಿಕೆಯಲ್ಲಿ 'ಕಾಂಕ್ವೆಸ್ಟ್ ಆಫ್ ಶೀಲಾದಿತ್ಯ ಇನ್ ದಿ ಸೌತ್' ಎಂಬ ಸಂಶೋಧನ ಲೇಖನವನ್ನು ಪ್ರಕಟಿಸಿ ವಿಶ್ವದ ಸಂಶೋಧಕರ ಗಮನ ಸೆಳೆದರು. ಆಗಿನ್ನೂ ಅವರು ಬಿ.ಎ. ಆನರ್ಸ್ ವಿದ್ಯಾರ್ಥಿ. ತಮಗೆ ಬೋಧಿಸಲು ಬಂದ ಇತಿಹಾಸ ಪ್ರಾಧ್ಯಪಕ ಪ್ರೊ ಎಸ್.ವಿ. ವೆಂಕಟೇಶ್ವರ ಅವರ ಗಮನ ಸೆಳೆದ ಶಾಸ್ತ್ರಿಗಳು, ತಮ್ಮ ಜೀವಿತದ ಕೊನೆಯವರೆಗೆ ಸಂಶೋಧನ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರು. ಅವರ ಯಾವುದೇ ಲೇಖನಗಳೂ ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕವಾಗಿರುತ್ತಿದ್ದವು.

ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲೇ ಓದಿ, ಅಲ್ಲೇ ಇತಿಹಾಸ ವಿಷಯದ ಟ್ಯೂಟರ್ ಆಗಿ ವೃತ್ತಿ ಜೀವನವನ್ನು ಆರಂಭಿಸಿದ ಡಾ॥ ಎಸ್.ಶ್ರೀಕಂಠಶಾಸ್ತ್ರಿಗಳು, ಅದೇ ವಿಭಾಗದ ಪ್ರೊಫೆಸರ್ ಆಗಿ ನಿವೃತ್ತರಾದರು. ಇತಿಹಾಸದ ವಿದ್ಯಾಥಿಗಳಿಗೆ ಕರ್ನಾಟಕ ಸಾಂಸ್ಕತಿಕ ಇತಿಹಾಸವನ್ನು ಬೋಧಿಸಿ, ಅಂದಿನ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಇತಿಹಾಸ ಮತ್ತು ಸಂಶೋಧನೆಗಳ ಬಗ್ಗೆ ತೀವ್ರ ಆಸಕ್ತಿಯನ್ನು ಬಿತ್ತಿದವರು ಪ್ರೊ ಎಸ್. ಶ್ರೀ ಕಂಠಶಾಸ್ತ್ರಿ

ಶಾಸ್ತ್ರಿಗಳು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ಬೋಧನೆ ಮಾಡುತ್ತಿದ್ದಾಗ ಕಾದಂಬರಿಕಾರರಾದ ತ.ರಾ.ಸು. ಮತ್ತು ಅ.ನ.ಕೃ. ಅವರು ಐತಿಹಾಸಿಕ ಕಾದಂಬರಿಗಳನ್ನು ಬರೆಯುತ್ತಿದ್ದರು. ಆಗೆಲ್ಲಾ ತಮ್ಮ ಬರವಣಿಗೆಗೆ ಪ್ರೇರಣೆ ಪಡೆಯುತ್ತಿದ್ದುದು ಡಾ॥ ಶ್ರೀಕಂಠಶಾಸ್ತ್ರಿಗಳಿಂದ ಎಂಬುದನ್ನು ಆಯಾ ಕಾದಂಬರಿಕಾರರೇ ತಿಳಿಸಿದ್ದಾರೆ.

ಬದುಕಿಗೆ ಸಂಬಂಧಿಸಿದ ಬಹುತೇಕ ಎಲ್ಲಾ ವಿಷಯ ಹಾಗೂ ವಿಚಾರಗಳನ್ನು ಇತಿಹಾಸದ ಒರೆಗೆ ಹಚ್ಚಿ ವಿಶ್ಲೇಷಿಸುವ ಮಹತ್ವದ ಕಾರ್ಯವನ್ನು ಡಾ॥ ಶಾಸ್ತ್ರಿಗಳು ಮಾಡಿದ್ದಾರೆ. ಆದುದರಿಂದ ನಿಜವಾದ ಅರ್ಥದಲ್ಲಿ ಅವರು ಪರಿಪೂರ್ಣ ಇತಿಹಾಸಕಾರ. ಅವರ ತರ್ಕಗಳು ಕೆಲವೊಮ್ಮೆ ಅಚ್ಚರಿ ಮೂಡಿಸುತ್ತವೆ. ಆದರೆ ಅವರ ಪ್ರಾಮಾಣಿಕತೆಯನ್ನು ಅನುಮಾನಿಸುವಂತಿಲ್ಲ. ಮನೆಮಾತು ತೆಲುಗಾದರೂ, ಅವರಿಗೆ ಪರಿಸರದ ಕನ್ನಡ ಭಾಷೆಯಯಲ್ಲಿ ಪ್ರಭುತ್ವ ಮಾತ್ರವಲ್ಲದೆ, ಪ್ರೀತಿ ಇದ್ದುದನ್ನು ಅವರ ಬರವಣಿಗೆಯ

ಮೂಲಕ ಅರ್ಥಮಾಡಿಕೊಳ್ಳಬಹುದು. ವಿದ್ವತ್ ಪರಂಪರೆಗೆ ಸೇರಿದ್ದ ಡಾ॥ ಶಾಸ್ತ್ರಿಗಳು, ತಮಗೆ ವಂಶಪಾರಂಪರ್ಯವಾಗಿ ಬಂದಿದ್ದ ಜ್ಞಾನ ಸಂಪತ್ತನ್ನು ಆಧುನಿಕ ವಿದ್ಯಾಭ್ಯಾಸದ ಹಿನ್ನಲೆಯಲ್ಲಿ ಹಿಗ್ಗಿಸಿಕೊಂಡರು. ಜ್ಞಾನಶಾಖೆಗಳ ಆಳ, ವಿಸ್ತಾರಗಳನ್ನು ಅರಿತರು, ಅದರ ಫಲವನ್ನು ಅವರ ಎಲ್ಲ ಲೇಖನ ಮತ್ತು ಕೃತಿಗಳ ಮೂಲಕವೂ ಆಸಕ್ತರಿಗೆ ಉಣಬಡಿಸಿದರು. ಎನ್.ಎಸ್.ಸುಬ್ಬರಾವ್, ಹೆಚ್. ಕೃಷ್ಣ ರಾವ್, ಎಸ್.ವಿ. ಕೃಷ್ಣಸ್ವಾಮಿ ಅಯ್ಯಂಗಾರ್, ಜೆ.ಸಿ.ರಾಲೋ, ಹೆಚ್. ನಂಜುಂಡಯ್ಯ, ಬಿ.ಎಂ.ಶ್ರೀಕಂಠಯ್ಯ, ಬಿ.ಕೃಷ್ಣಪ್ಪ, ವಿ.ಎಲ್.ಡಿಸೋಜ, ಪ್ರೊ॥ ಹಿರಿಯಣ್ಣ, ಡಾ॥ ಎಂ.ಹೆಚ್. ಕೃಷ್ಣ ಎ.ಆರ್. ಕೃಷ್ಣಶಾಸ್ತ್ರಿ ಇತ್ಯಾದಿ ಆ ಕಾಲದ ಶ್ರೇಷ್ಠ ವಿದ್ವಾಂಸರ ಕೈಯಲ್ಲಿ ರೂಪು ಪಡೆದ ಡಾ॥ ಶ್ರೀಕಂಠಶಾಸ್ತ್ರಿ ಅವರು, ಗುರು ಪರಂಪರೆಯ ದಾರಿಯನ್ನು ಮುಂದುವರೆಸಲು ಪ್ರಯತ್ನಿಸಿದರು. ಅವರ ಶಿಷ್ಯರನೇಕರು ಈ ಮಾತುಗಳಿಗೆ ಸಾಕ್ಷಿ ಆಗಿದ್ದಾರೆ. ಅವರು ಬದುಕಿದ್ದರೆ, ಅವರಿಗೆ ಈಗ ೧೦೦ ವರ್ಷ ತುಂಬುತ್ತಿತ್ತು. ಅವರು ಇಲ್ಲ. ಅವರ ನೆನಪನ್ನು ಹಸಿರಾಗಿಡುವ ಪ್ರಯತ್ನದಿಂದ ಈಗ ಅವರು ಮತ್ತು ಅವರ ಕಾರ್ಯಚಟುವಟಿಕೆಗಳನ್ನು ನೆನಪು ಮಾಡಿಕೊಳ್ಳಲು ಅವರ ಜನ್ಮ ಶತಾಬ್ದಿಯನ್ನು ಆಚರಿಸಲಾಗುತ್ತಿದೆ.

ಕರ್ನಾಟಕ ಇತಿಹಾಸದ ಮೂಲ ಆಕರಗಳನ್ನು ಕುರಿತು ಶ್ರೀಕಂಠಶಾಸ್ತ್ರಿಗಳು ಮಾಡಿದ ಕೆಲಸವು ಇಂದಿಗೂ ಒಂದು ಮಾರ್ಗದರ್ಶಿಯಾಗಿದೆ. ಅವರ ಸಂಪಾದನೆಯ ಒಂದು ಸಂಪುಟ ಮಾತ್ರ ಬಹಳ ಹಿಂದೆ ಪ್ರಕಟ ಆಗಿದೆಯಲ್ಲದೆ, ಉಳಿದ ಎರಡು ಸಂಪುಟಗಳು ಪ್ರಕಟಣೆಯ ಬೆಳಕು ಕಂಡಿಲ್ಲ. ಅವರ 'ಸೋರ್ಸಸ್ ಆಫ್ ಕರ್ನಾಟಕ ಹಿಸ್ಟರಿ'ಯ ಮೊದಲ ಸಂಪುಟವೂ ಬೆಳಕು ಕಾಣಲು ಬಹಳ ಶ್ರಮ ಪಡಬೇಕಾಯಿತು. ಕಾರಣಾಂತರಗಳಿಂದ, ಎರಡು ಬಾರಿ ಸಲ್ಲಿಸಿದ ಹಸ್ತಪ್ರತಿಯೂ ಕಳೆದುಹೋಗಿ, ಮೂರನೆಯ ಬಾರಿಗೆ ಸಲ್ಲಿಸಿದ ಹಸ್ತಪ್ರತಿಯು ೧೯೪೦ರಲ್ಲಿ ಪ್ರಕಟವಾಯಿತು. ಎರಡು ಮತ್ತು ಮೂರನೆ ಸಂಪುಟಗಳು ಹಸ್ತಪ್ರತಿಯಾಗಿಯೇ ಉಳಿದಿವೆ. ಮೊದಲ ಸಂಪುಟವು ಅರುವತ್ತು ವರ್ಷಗಳ ನಂತರವೂ ಮರುಮುದ್ರಣ ಕಂಡಿಲ್ಲ.

ಕನ್ನಡ ಆನರ್ಸ್ ವಿದ್ಯಾರ್ಥಿಗಳಿಗೆ ಅವರು ಬೋಧಿಸಿದ ಕರ್ನಾಟಕ ಸಾಂಸ್ಕೃತಿಕ ಇತಿಹಾಸವು, ಇಂದಿಗೂ ಅವರ ಶಿಷ್ಯರ ಮೂಲಕ ಮುಂದುವರೆದಿದೆ. 'ಸೋರ್ಸಸ್ ಆಫ್ ಕರ್ನಾಟಕ ಹಿಸ್ಟರಿ'ಗಾಗಿ ದಿವಾನ್ ಮಿರ್ಜಾ ಇಸ್ಮಾಯಿಲ್, ಆರ್.ಆರ್.ದಿವಾಕರ್ ಅಂತಹ ಆಡಳಿತ ನಿಪುಣರು, ಎಲ್.ಡಿ.ಬಾರ್ನೆಟ್, ಆರ್.ಸಿ.ಮಜುಂಧಾರ್, ಪಿ.ಕೆ. ಗೋಡೆ, ವಿ. ಸೀತಾರಾಮಯ್ಯ ಮುಂತಾದ ವಿದ್ವಾಂಸರ ಮೆಚ್ಚುಗೆ ಪಡೆದಿತ್ತು ಎಂಬುದು ದಾಖಲಿಸಬೇಕಾದ ವಿಚಾರ.

ಶ್ರೀಕಂಠ ಶಾಸ್ತ್ರಿಗಳ ೩೦೦ಕ್ಕೂ ಹೆಚ್ಚು ಸಂಶೋಧನ ಲೇಖನಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪ್ರಕಟವಾಗಿರುವ ಹಲವು ಗ್ರಂಥಗಳು ಇವರಿಗಿದ್ದ ಅಪಾರ ಜ್ಞಾನದ ದಾಖಲೆಗಳಾಗಿ ಉಳಿದಿವೆ. ಕೆಲವು ಲೇಖನಗಳ ಬಗ್ಗೆ ಚರ್ಚೆಗಳು ಇಂದಿಗೂ ಮುಂದುವರೆದಿವೆ. ಅವರ ಅಭಿಪ್ರಾಯಗಳ ಬಗ್ಗೆ ಭಿನ್ನಾಭಿಪ್ರಾಯವಿದ್ದರೂ ಸಹ. ಅವರ ಪ್ರಾಮಾಣಿಕತೆಯ ಬಗ್ಗೆ ಯಾವ ವಿದ್ವಾಂಸರೂ ಅನುಮಾನ ಪಡುವುದಿಲ್ಲ. ಇದು ಅವರ ಸಂಶೋಧನೆಯ ಮಹತ್ವ. ಡಾ॥ ಶಾಸ್ತ್ರಿಗಳ ೧೧೨ ಲೇಖನಗಳನ್ನು ಡಾ॥ ಬಾ.ರಾ.ಗೋಪಾಲ್ ಮತ್ತು ಡಾ॥ ಟಿ.ವಿ.ವೆಂಕಟಾಚಲಶಾಸ್ತ್ರಿಗಳು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಗೆ ಸಂಪಾದಿಸಿ ಕೊಟ್ಟಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯವೇ ಪ್ರಕಟಿಸಿರುವ ಈ 'ಸಂಶೋಧನ ಲೇಖನಗಳು' ಕೃತಿಯು ಡಾ॥ ಶಾಸ್ತ್ರಿಗಳ ವಿದ್ವತ್ತು ಮತ್ತು ಇತಿಹಾಸದ ಅನೇಕ ಜ್ಞಾನ ಶಾಖೆಗಳಲ್ಲಿ ಅವರಿಗಿದ್ದ ಅಪಾರ ಜ್ಞಾನದ ಪರಿಚಯ ಮಾಡಿಕೊಡುತ್ತವೆ. ಹರಪ್ಪ–

ಮಹೆಂಜೋದಾರೋ ಸಂಸ್ಕೃತಿಯ ಬಗ್ಗೆ ಅವರಿಗಿದ್ದ ಅಭಿಪ್ರಾಯಗಳು, ಸೈಂಧವ ಸಂಸ್ಕೃತಿಯ ಬಗೆಗಿನ ಅವರ ತಿಳುವಳಿಕೆ ಮತ್ತು ಭಾರತೀಯ ಸಂಸ್ಕೃತಿಯನ್ನು ಕುರಿತು ಅವರ ಬಳಿ ಇದ್ದ ಅಪಾರ ಮಾಹಿತಿಗಳು ಸಂಶೋಧಕರಿಗೆ ಅಚ್ಚರಿ ಮೂಡಿಸುತ್ತವೆ.

'ಭಾರತೀಯ ಸಂಸ್ಕೃತಿ', 'ಪುರಾತತ್ವ ಶೋಧನೆ', 'ಹೊಯ್ಸಳ ವಾಸ್ತು ಶಿಲ್ಪ', 'ಪ್ರಪಂಚ ಚರಿತ್ರೆಯ ರೂಪರೆಖೆಗಳು' ಇತ್ಯಾದಿ, ಇವುಗಳ ಅಧ್ಯಯನದಿಂದ ಡಾ॥ ಶಾಸ್ತ್ರಿಗಳಿಗೆ ಇತಿಹಾಸದ ವಿವಿಧ ಶಾಖೆಗಳ ಬಗ್ಗೆ ಇದ್ದ ಅಪಾರ ತಿಳುವಳಿಕೆ ಮತ್ತು ಅವುಗಳನ್ನು ಅರ್ಥೈಸುವ ಪರಿ ಬೆರಗುಗೊಳಿಸುತ್ತದೆ. 'ಹೊಯ್ಸಳ ವಾಸ್ತು ಶಿಲ್ಪ' ವು ಹೊಯ್ಸಳ ವಾಸ್ತು ಶಿಲ್ಪ ಮತ್ತು ಹೊಯ್ಸಳದೇವಾಲಯಗಳ ಬಗ್ಗೆ ಇಂದಿಗೂ ತಿಳಿಯಲು ಇರುವ ಬಹು ಮುಖ್ಯ ಆಕರ ಗ್ರಂಥ.

ಕನ್ನಡ ಸಾಹಿತ್ಯ ಸಮ್ಮೇಳನದ ಗೋಷ್ಠಿಯ ಅಧ್ಯಕ್ಷತೆ ಮತ್ತು ಹಲವು ಸನ್ಮಾನ-ಗೌರವಗಳಿಗೆ ಪಾತ್ರರಾಗಿದ್ದ ಶಾಸ್ತ್ರಿಗಳು ತಮ್ಮ ಅಧ್ಯಾಪನ ವೃತ್ತಿಯಿಂದ ೧೯೬೦ರಲ್ಲಿ ನಿವೃತ್ತರಾದರು. ನಂತರವೂ ತಮ್ಮ ತೀವ್ರ ಅನಾರೋಗ್ಯದ ನಡುವೆಯೂ ಅಧ್ಯಯನ ಮತ್ತು ಸಂಶೋಧನೆಗಳನ್ನು ಮುಂದುವರೆಸಿದ ಡಾ॥ ಶಾಸ್ತ್ರಿಗಳು ೧೯೭೪ರಲ್ಲಿ ವಿಧಿವಶರಾದರು.

ಸುಮಾರು ಎಪ್ಪತ್ತು ವರ್ಷಗಳ ಕಾಲ ಶಾಸ್ತ್ರಿಗಳು ಸಾರ್ಥಕ ಬದುಕನ್ನು ನಡೆಸಿದರು. ಬಾಲ್ಯದಲ್ಲೇ ಸಿಡುಬು ರೋಗಕ್ಕೆ ತುತ್ತಾಗಿ, ಎಡ ಕಿವಿ ಮತ್ತು ಎಡ ಕಣ್ಣುಗಳ ಶಕ್ತಿಯನ್ನು ಕಳೆದುಕೊಂಡಿದ್ದು, ಕೊನೆಗೆ ಪಾರ್ಶ್ವವಾಯುವಿನಿಂದಲೂ ಪೀಡಿತರಾಗಿದ್ದ ಮತ್ತು ವೃತ್ತಿ ಜೀವನದಲ್ಲೂ ಹಲವು ಏರಿಳಿತಗಳನ್ನು ಕಂಡು ಹಣ್ಣಾಗಿದ್ದ ಡಾ॥ ಶ್ರೀಕಂಠ ಶಾಸ್ತ್ರಿಗಳು ತಮ್ಮ ಎಲ್ಲ ಮಿತಿಗಳನ್ನೂ ಮೀರಿ ಇತಿಹಾಸದ ಅಧ್ಯಯನಕ್ಕೆ ನೀಡಿರುವ ಕೊಡುಗೆ ಅನನ್ಯ.

ಡಾ॥ ಶಾಸ್ತ್ರಿಗಳ ಎಲ್ಲಾ ಬರವಣಿಗೆಗಳು ಬೆಳಕು ಕಂಡಿಲ್ಲ. ೧೯೮೯ರಲ್ಲಿ ಪ್ರಕಟವಾದ ಅವರ 'ಜಿಯೋ ಪಾಲಿಟಿಕ್ಸ್ ಆಫ್ ಇಂಡಿಯಾ ಅಂಡ್ ಗ್ರೇಟರ್ ಇಂಡಿಯಾ' ಕೃತಿಯು ೧೯೪೩ರಲ್ಲೇ ಸಿದ್ಧವಾಗಿತ್ತು. ಅವರ ಇಂಗ್ಲಿಷ್ ಲೇಖನಗಳ ಸಂಪುಟ ಪ್ರಕಟವಾಗಬೇಕಾಗಿದೆ. 'ಸೋರ್ಸಸ್ ಆಫ್ ಕರ್ನಾಟಕ ಹಿಸ್ಟರಿ'ಯ ಎರಡು ಮತ್ತು ಮೂರನೆಯ ಸಂಪುಟಗಳು ಬೆಳಕು ಕಾಣಬೇಕಾಗಿದೆ. ಅವರಿಗೆ ೧೯೭೩ರಲ್ಲಿ 'ಶ್ರೀಕಂಠಿಕಾ' ಎಂಬ ಸಂಭಾವನ ಗ್ರಂಥವನ್ನು ಅರ್ಪಿಸಿ ಸಂತೋಷಪಟ್ಟ ಅವರ ವಿದ್ಯಾರ್ಥಿಗಳು ಮತ್ತು ಅಭಿಮಾನಿಗಳು ಅವರ ಅಪ್ರಕಟಿತ ಕೃತಿಗಳ ಪ್ರಕಟಣೆ ಮತ್ತು ಅಲಭ್ಯ ಗ್ರಂಥಗಳ ಲಭ್ಯತೆಗೆ ಮುಂದಾದರೆ, ಅವರ ಜನ್ಮಶತಮಾನೋತ್ಸವ ವರ್ಷದಲ್ಲಿ ಔಚಿತ್ಯಪೂರ್ಣ ಶ್ರದ್ಧಾಂಜಲಿ ಅರ್ಪಿಸಿದಂತಾಗುತ್ತದೆ.

(ಸಾಭಾರ- ಪ್ರಜಾವಾಣಿ)

****

ಜನಪದ ನಿಲಯದ ಅಂತರಂಗದಲ್ಲಿ.....೧೬.



ಮೇಲುಕೋಟೆಯನ್ನು ನನ್ನ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಳ್ಳಬೇಕೆಂದು ನಿಶ್ಚಿತ ಮಾಡಿಕೊಂಡ ಮೇಲೆ ನಾನು ನೇಕಾರರ ಸಂಪರ್ಕ ಬೆಳೆಸಿಕೊಳ್ಳಲು ಪ್ರಯತ್ನಿಸಿದೆ. ಅವರಲ್ಲಿ ಅನೇಕರು ಖಾದಿ ಬಟ್ಟೆ ನೇಯ್ಗೆಮಾಡಿ ಕೊಡಲು ಮುಂದೆ ಬಂದರು. ಆ ಸಮಯದಲ್ಲಿ ಗಂಗಣ್ಣ ಶೆಟ್ಟರು ಎಂಬ ಹಿರಿಯ ನೇಕಾರರು ಇದ್ದರು ಆಗ ಅವರಿಗೆ ಸುಮಾರು ೭೦ವರ್ಷ ಆಗಿದ್ದಿರಬಹುದು. ಅವರ ಪರಿಚಯವಾದಾಗ ಅವರು ಖಾದಿ ನೇಯ್ಗೆ ಮಾಡಿದ್ದನ್ನು ತಿಳಿಸಿದರು. ಅಷ್ಟೇ ಅಲ್ಲ ತಮ್ಮ ಕೈಯಿಂದ ನೇಯ್ಗೆ ಮಾಡಿದ್ದ ಖಾದಿ ಬಟ್ಟೆಯನ್ನು ಭಕ್ತಿಪೂರ್ವಕವಾಗಿ ಗಾಂಧೀಜಿಯವರಿಗೆ ಕಳುಹಿಸಿದ್ದನ್ನು ಸಹ ಹೇಳಿದರು. ಗಂಗಣ್ಣ ಶೆಟ್ಟರು ವಯಸ್ಸಿನಲ್ಲಿ ದೊಡ್ಡವರಾಗಿದ್ದರೂ ಸಹ ಶ್ರಮಿಸುವುದರಲ್ಲಿ ಯಾವ ಯುವಕನಿಗಿಂತ ಕಡಿಮೆಯಾಗಿರಲಿಲ್ಲ. ಅವರಿಗೆ ಮೇಲುಕೋಟೆಯ ಬಗ್ಗೆ ಅಪಾರವಾದ ಅಭಿಮಾನ ಮತ್ತು ಪ್ರೀತಿ ಇದ್ದವು. ಅವರು ತುಂಬ ದೈವ ಭಕ್ತರೂ ಆಗಿದ್ದರು. ಆದ್ದರಿಂದ ಅವರಿಗೆ ಮೇಲುಕೋಟೆಯ ಪರಿಸರವೆಲ್ಲವೂ ಪೂಜನೀಯವಾಗಿ ಕಾಣಿಸುತ್ತಿತ್ತು. ಮೇಲುಕೋಟೆಯಲ್ಲಿ ಇರುವ ಕೊಳಗಳ ದುರವಸ್ಥೆಯನ್ನು ನೋಡಿ ಅವರಿಗೆ ಬಹಳ ನೋವಾಗುತ್ತಿತ್ತು. ಮೇಲುಕೋಟೆಯ ನೇಕಾರರ ಮೇಲೆ ಶ್ರೀ ವೈಷ್ಣವ ಸಂಪ್ರದಾಯದ ಪ್ರಭಾವವಿದೆ. ಈ ಕಾರಣದಿಂದಾಗಿ ಮೇಲುಕೋಟೆಯ ನೇಕಾರರಲ್ಲಿಯ ಅನೇಕರು ಬಳಿಗ್ಗೆ ಎದ್ದು ಬಟ್ಟೆ ಒಗೆಯಲು, ಸ್ನಾನ ಮಾಡಲು ಕೆರೆಗೆ ಹೋಗುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ. ಅವರಲ್ಲಿ ಕೆಲವರು ನಾಮವನ್ನು ಸಹ ಧರಿಸುತ್ತಾರೆ. ಗಂಗಣ್ಣ ಶೆಟ್ಟರೂ ಸಹ ತಮ್ಮ ಇಳಿವಯಸ್ಸಿನಲ್ಲೂ ಯಾವುದಾದರೂ ಕೊಳಕ್ಕೆ ಹೋಗಿ ಸ್ನಾನ ಮಾಡಿಕೊಂಡು ಬರುವ ಪರಿಪಾಠವನ್ನು ಇಟ್ಟುಕೊಂಡಿದ್ದರು. ಮೇಲುಕೋಟೆಯಲ್ಲಿ ನೂರಾರು ಕೊಳಗಳಿರುವುದೇ ಕೊಳಗಳನ್ನು ಸುಸ್ಥಿತಿಯಲ್ಲಿಡಲು ಅಡ್ಡಿಯಾಗಿದೆ. ಬೇರೆ ಊರುಗಳಲ್ಲಿಯಂತೆ ಒಂದೋ ಅಥವಾ ಎರಡೋ ಕೊಳಗಳಿದ್ದಿದ್ದರೆ ಅವುಗಳು ಶುಚಿಯಾಗಿರುತ್ತದ್ದವೋ ಏನೋ. ಆದರೆ ಮೇಲುಕೋಟೆಯಲ್ಲಿ ಕೊಳಗಳು ದೂರದೂರದಲ್ಲಿ ಇರುವುದರಿಂದ ಅವುಗಳನ್ನು ಶುಚಿಯಾಗಿಡುವುದು ಕಷ್ಟಸಾಧ್ಯವಾಗಿದ್ದಿರಬಹುದು. ಆದರೆ ಮೇಲುಕೋಟೆಯ ನಿವಾಸಿಗಳಿಗೆ ಅದರಲ್ಲೂ ಮುಖ್ಯವಾಗಿ ನೇಕಾರರ ಸಮುದಾಯದಲ್ಲಿ ಕೊಳಗಳ ಬಗ್ಗೆ ಹೆಚ್ಚು ಮಮತೆ ಇದ್ದಿತು. ಆದ್ದರಿಂದ ಸಹಜವಾಗಿಯೆ ಅವುಗಳನ್ನು ಶುಚಿಯಾಗಿಡಬೇಕು ಮತ್ತು ಅವುಗಳನ್ನು ತಲುಪುವ ದಾರಿ ಸುಗಮವಾಗಿರಬೇಕೆಂಬ ವಿಚಾರ ನೇಕಾರರಲ್ಲಿ ಮೂಡಿದ್ದು ಅಚ್ಚರಿಯೇನಲ್ಲ. ಗಂಗಣ್ಣ ಶೆಟ್ಟರಲ್ಲಿ ಈ ವಿಚಾರ

ಸ್ವಲ್ಪ ತೀವ್ರವಾಗಿಯೇ ಇದ್ದಿತು. ಆದ್ದರಿಂದ ಅವರು ಪ್ರತಿ ದಿನ ಬೆಳಿಗ್ಗೆ ತಾವು ಕೊಳಕ್ಕೆ ಸ್ನಾನ ಮಾಡಲು ಹೋಗುವಾಗ ತಮ್ಮೊಂದಿಗೆ ಕೆಲವು ಉಪಕರಣಗಳನ್ನು ಹಾಗೂ ಕೆಲವು ಜನ ನೇಕಾರ ಯುವಕರನ್ನು ಕರೆದುಕೊಂಡು ಹೋಗಲು ಮರೆಯುತ್ತಿರಲಿಲ್ಲ. ಬಟ್ಟೆ ಒಗೆದು ಸ್ನಾನ ಮಾಡುವ ಮುನ್ನ ತಮ್ಮೊಂದಿಗೆ ಬಂದಿದ್ದ ಯುವಕರ ನೆರವಿನಿಂದ ಒಂದೆರಡು ಗಂಟೆಗಳ ಕಾಲ ಕೊಳದ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುತ್ತಿದ್ದರು. ಕೆಲಸ ಮಾಡುವಾಗ ಯುವಕರನ್ನು ಹುರಿದುಂಬಿಸುತ್ತಿದ್ದರು ಮತ್ತು ಭಕ್ತಿ ಶ್ರದ್ಧೆಗಳಿಂದ ಕೆಲಸ ಮಾಡುವಂತೆ ಕಿವಿ ಮಾತು ಹೇಳುತ್ತಿದ್ದರು. ಗಂಗಣ್ಣನವರ ಇಂಥ ಶ್ರಮದಾನದ ಕೆಲಸಗಳಲ್ಲಿ ಭಾಗವಹಿಸುವಂಥ ಮತ್ತು ಗಂಗಣ್ಣನವರ ಹುರುಪನ್ನು ಅನುಭವಿಸುವಂಥ ಅವಕಾಶ ನನಗೆ ಸಿಕ್ಕಿತ್ತು. ಈಗ ಗಂಗಣ್ಣನವರಿಲ್ಲ. ಆದರೂ ಕೂಡ ಗಂಗಣ್ಣನವರು ಮಾಡುತ್ತಿದ್ದ ಆ ಕೆಲಸ ಕೇವಲ ನನ್ನೊಬ್ಬನ ಕಣ್ಣ ಮುಂದೆ ಮಾತ್ರ ಅಲ್ಲ ಊರಿನ ಇಂದಿನ ಕೆಲ ಹಳಬರ ಕಣ್ಣ ಮುಂದೆಯೂ ಇದೆ.

ಗಂಗಣ್ಣನವರ ಪರಿಚಯವಾದ ಮೇಲೆ ಮೇಲುಕೋಟೆಯಲ್ಲಿ ಖಾದಿ ಬಟ್ಟೆ ನೇಯ್ಗೆಯ ಪ್ರಯತ್ನವನ್ನು ಮಾಡಬೇಕೆಂಬ ವಿಚಾರ ಬಂತು. ಮೇಲುಕೋಟೆಯಲ್ಲಿ ನೇಕಾರರ ಸಹಕಾರ ಸಂಘವೇನೋ ಇತ್ತು. ಆದರೆ ಅನೇಕ ಬಾರಿ ನೇಕಾರರಿಗೆ ಸಕಾಲಕ್ಕೆ ಆ ಸಂಘದಿಂದ ನೇಯ್ಗೆಗೆ ನೂಲು ಸಿಗದೆ ಇರುತ್ತಿದ್ದುದರಿಂದ ಅವರ ಜೀವನಕ್ಕೆ ತೊಂದರೆಯಾಗುತ್ತಿತ್ತು.

ನಾನು ನೇಕಾರರ ಸಮಸ್ಯೆಯನ್ನು ಅರಿಯುವುದಕ್ಕಾಗಿ ಮತ್ತು ನನ್ನ ಸಾರ್ವಜನಿಕ ಕೆಲಸಕ್ಕೆ ಅವರ ಸಹಕಾರವನ್ನು ಪಡೆಯುವುದಕ್ಕಾಗಿ ಮತ್ತು ನೇಯ್ಗೆ ಕೆಲಸ ಕಲಿಯಬೇಕೆಂಬ ಉದ್ದೇಶಕ್ಕಾಗಿ ದಿನಾಲೂ ಒಂದೆರಡು ಬಾರಿ ನೇಕಾರರ ಕೇರಿಗಲಲ್ಲಿ ಸುತ್ತಾಡಿ ಬರುತ್ತಿದ್ದೆ ಮತ್ತು ಕೆಲವರ ಮನೆಯೊಳಗೂ ಹೋಗಿ ಕುಳಿತುಕೊಳ್ಳುತ್ತಿದ್ದೆ. ಇಂಥವರಲ್ಲಿ ನನಗೆ ಮುಖ್ಯವಾಗಿ ನೆನಪಾಗುತ್ತಿರುವ ಹೆಸರುಗಳು, ಹೆಂಜಯ್ಯನ ಲೋಕಯ್ಯ ಶೆಟ್ಟಿ, ಕರಿ ಶೆಟ್ಟಿ, ನಾರಾಯಣ ಶೆಟ್ಟಿ, ಶ್ರೀನಿವಾಸ ಶೆಟ್ಟಿ, ಪೆದ್ದ ಶೆಟ್ಟಿ, ಭೋಜ ಶೆಟ್ಟಿ, ನಾಗಪ್ಪ ಶೆಟ್ಟಿ, ಹನುಮಂತ ಶೆಟ್ಟಿ, ಮೂಡಲಬಾಗಿಲು ತಿಮ್ಮಯ್ಯ ಶೆಟ್ಟಿ ಮುಂತಾದವರು. ಹೆಂಜಯ್ಯ ಲೋಕಯ್ಯ ಶೆಟ್ಟರ ಮನೆಯಲ್ಲಿ ನಾನು ನೇಯ್ಗೆ ಕಲಿಯಲು ಪ್ರಯತ್ನಿಸಿದ್ದೆ. ಹೀಗೆ ನೇಕಾರರೊಂದಿಗೆ ಸಂಪರ್ಕ ಬೆಳೆಸುತ್ತಿದ್ದಾಗ ಅವರ ಅನೇಕ ಕಷ್ಟಗಳ ಪರಿಚಯವಾಯಿತಲ್ಲದೆ ಅವರ ಜೀವನ ವಿಧಾನಗಳ ಪರಿಚಯವೂ ಆಯಿತು. ನೇಕಾರ ಬಾಂಧವರಲ್ಲಿ ವರ್ಷಕ್ಕೊಂದು ಬಾರಿ ಹರಿ ಸೇವೆ ಮಾಡುವ ಪದ್ಧತಿ ಇದೆ. ನಾನೊಂದು ಸಲ ಪುಷ್ಕರಣಿ ಬಳಿ ನಡೆದ ಹರಿ ಸೇವೆಯಲ್ಲಿ ಭಾಗವಹಿಸಿದ್ದೆ. ಆ ಸಮಯದಲ್ಲಿಯೆ ನಾನು ಬರೆದಿದ್ದ ನೇಕಾರರ ಒಗ್ಗಟ್ಟಿನ ಮಹತ್ವವನ್ನು ತಿಳಿಸುವ ಹಸ್ತ ಪತ್ರಿಕೆಯನ್ನು ಹಂಚಿದ್ದೆ.

(ಮುಂದುವರಿಯುವುದು)

ಧರ್ಮ ಮತ್ತು ಪ್ರಜಾಪ್ರಭುತ್ವ

-ಶ್ರೀ ಶಿವಮೂರ್ತಿ ಶರಣರು

ಧರ್ಮವು ಒಂದು ವಿಧದಲ್ಲಿ ಪ್ರಭುತ್ವಕ್ಕೆ ಒಳಗಾಗಿದೆ. ಪ್ರಭುತ್ವದ ಮಾತನ್ನು ಕೇಳುತ್ತ ಬಂದಿರುತ್ತದೆ. ಧರ್ಮವು ಸಾಧ್ಯವಾದರೆ ಪ್ರಭುತ್ವವನ್ನು ನಿಯಂತ್ರಿಸಬೇಕಾಗಿತ್ತು. ಅದು ಹಾಗೆ ಮಾಡದೆ ಪ್ರಭುತ್ವದ ಕೈಯಲ್ಲಿನ ಗೊಂಬೆಯಂತೆ ಇದ್ದುಕೊಂಡು ಬಂದಿದೆ. ಪ್ರಭುತ್ವವೆಂದರೆ, ಅಧಿಕಾರ. ಅಧಿಕಾರ ಶಾಹಿಯನ್ನು ಓಲೈಸುತ್ತಾ ತನ್ನ ಸ್ವರೂಪವನ್ನು ಅದು ಮರೆತು ಕೈಕಟ್ಟಿ ಕುಳಿತ ಸಂದರ್ಭಗಳವು. ಪ್ರಭುತ್ವವಾದರೂ ತನ್ನ ಪ್ರಭಾವವನ್ನು ಶ್ರೀಸಾಮಾನ್ಯರ ಮೇಲೆ ಹೇರುವ ಪ್ರಯತ್ನದಲ್ಲಿ ಧರ್ಮವನ್ನು ದುರುಪಯೋಗ ಮಾಡುತ್ತಾ ಬಂದಿದೆ. ಪ್ರಭುತ್ವದ ಮುಖವಾಣಿಯೇ "ನಾನು ಹೇಳಬೇಕು, ನೀನುಕೇಳಬೇಕು", ನಾನು ಹೇಳಿದಂತೆ ನೀನು ಕೇಳಬೇಕು. ಈ ರೀತಿಯ ಧೋರಣೆಯಿಂದಾಗಿ ಪ್ರಭುತ್ವದ ಮೇಲೆ ಧರ್ಮಕ್ಕೆ ಯಾವುದೇ ಪ್ರಭುತ್ವವನ್ನು ಸಾಧಿಸಲು ಸಾಧ್ಯವಾಗಿಲ್ಲ. ಯಾವಾಗ ಧರ್ಮವು ಪ್ರಭುತ್ವದಿಂದ ಬಿಡುಗಡೆಗೊಂಡಿತೊ ಆ ಕ್ಷಣದಿಂದಲೆ ಅದು ಮತಾಂಧತೆಯಾಗಿ ಮಾರ್ಪಟ್ಟಿದೆ. ಧರ್ಮವು ಪ್ರಸ್ತುತ ಜಗತ್ತಿನಲ್ಲಿ ಮತಾಂಧತೆಯನ್ನು ಬಿತ್ತುವ ಕೆಲಸವನ್ನು ತುಂಬ ವ್ಯವಸ್ಥಿತವಾಗಿ ಮಾಡುತ್ತಿದೆ. ತನ್ಮೂಲಕ ಧರ್ಮವು ಇಂದು ಮತಾಂಧರ ಕೈಗೊಂಬೆಯಾಗಿದೆ. ಮತಾಂಧತೆಗೆ ವಿವೇಕ ಇರುವುದಿಲ್ಲ; ಮಾನವೀಯತೆಯ ಮುಖವು ಅದಕ್ಕಿರುವುದಿಲ್ಲ, ಬರೀ ಹಿಂಸೆ. ಮಾನವ ಮಾನವರ ನಡುವೆ ಹಗೆಯನ್ನು ಹೊತ್ತಿಸಿ, ಹಿಂಸೆಯನ್ನು ಪ್ರಚೋದಿಸುತ್ತಾ ಅದು ಸಾಗಿದೆ. ಧರ್ಮದಲ್ಲಿ ಮತಾಂಧತೆ ಇಣುಕಿದ ಸಂದರ್ಭದಿಂದಲೇ ಧರ್ಮದ ಜೀವ ಹೋದಂತಾಗಿದೆ.

ಧರ್ಮವೆಂದರೆ ಮತಾಂಧತೆ ಅಲ್ಲ ಎಂಬುದು ಜಗತ್ತಿಗೆ ಅರ್ಥವಾಗಬೇಕು. ಇಲ್ಲದಿದ್ದರೆ ಅನಾಹುತವಾದೀತು. ಎಲ್ಲ ಧರ್ಮದ ಮುಖಂಡರು ಸೇರಿ ಧರ್ಮವು ಮತಾಂಧತೆ ಆಗುವುದನ್ನು ತಪ್ಪಿಸಬೇಕು. ಇಲ್ಲವಾದಲ್ಲಿ ಯಾವ ಧರ್ಮಕ್ಕೂ ಅಸ್ತಿತ್ವ ಉಳಿಯುವುದಿಲ್ಲ.

ಎಲ್ಲ ಧರ್ಮಗಳಿಗೂ ತನ್ನದೇ ಆದ ಧಾರ್ಮಿಕ ಪ್ರಚಾರಕರು ಇರುತ್ತಾರೆ. ಅವರಿಗೆ ತಮ್ಮದೇ ಆಗಿರುವ ನಿರ್ಬಂಧಗಳಿರುತ್ತವೆ. ಅವುಗಳನ್ನು ಮೀರಿ ಅವರು ವರ್ತಿಸಬಾರದು. ಆದರೆ ಇಂದು ಧಾರ್ಮಿಕ ನಾಯಕರು ನಿರಂಕುಶ ಪ್ರಭುಗಳನ್ನು ಹೋಲುವ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಅವರ ಮೇಲೆ ಯಾವ ಹಿಡಿತವಿಲ್ಲ. ಅವರೇ ಪ್ರಭುಗಳೋಪಾದಿಯಲ್ಲಿ ಮೆರೆಯುತ್ತಿದ್ದಾರೆ. ತಾವು ಧಾರ್ಮಿಕ ನಾಯಕರೆಂಬ ಹಣೆಪಟ್ಟಿ ಕಟ್ಟಿಕೊಂಡು ತಮ್ಮ ದರ್ಪವನ್ನು ತೋರಿಸುತ್ತಿದ್ದಾರೆ. ಧಾರ್ಮಿಕನು ದರ್ಪದ ಬೆನ್ನೇರಿ ಅವನು ಮಾಡುವುದಾದರೂ ಏನನ್ನು? ದರ್ಪ ಇರುವಲ್ಲಿ ದೌರ್ಜನ್ಯ ಇರಲೇಬೇಕು. ದರ್ಪ ಮತ್ತು ದೌರ್ಜನ್ಯ ಎರಡೂ ಸೇರಿದಲ್ಲಿ ಶೋಷಣೆ. ಧರ್ಮವು ಇಂದಿನ ದಿನಮಾನಗಳಲ್ಲಿ ಶ್ರೀಸಾಮಾನ್ಯರನ್ನು, ಕಷ್ಟದಲ್ಲಿರುವವರನ್ನು, ಬೆಂಕಿಯಲ್ಲಿ

ಬೆಯುತ್ತಿರುವವರನ್ನು, ಅಮಾಯಕರನ್ನು ಶೋಷಿಸುವ ಒಂದು ಅಸ್ತ್ರವಾಗಿದೆ.

ಸ್ವರ್ಗ ನರಕಗಳ ಆಸೆಯನ್ನು ಹುಟ್ಟಿಸಿ ಪುಣ್ಯ ಪಾಪಗಳ ಬಲೆಯನ್ನು ಬೀಸಿ, ಪುನರ್ಜನ್ಮದ ಮೋಹವನ್ನು ತೋರಿಸಿ, ಆತ್ಮ–ಪರಮಾತ್ಮಗಳ ಕಲ್ಪನೆಯನ್ನು ಸೃಷ್ಟಿಸಿ ಅತೀ ಮುಗ್ಧರನ್ನು ವಂಚಿಸುತ್ತಿದೆ. ಈ ವಂಚನೆಗೆ ಒಳಗಾಗದವರೇ ಇಲ್ಲ. ಎಲ್ಲ ದೇಶ, ಎಲ್ಲ ಧರ್ಮಗಳಲ್ಲೂ ಈ ಶೋಷಣೆ ನಡೆದೇ ಇದೆ. ಧರ್ಮದಿಂದ ಮೊದಲು ಪಾಪ– ಪುಣ್ಯ; ಸ್ವರ್ಗ–ನರಕ. ಆತ್ಮ ಪರಮಾತ್ಮ, ಅವತಾರ ಪುನರ್ಜನ್ಮ ಇಂಥ ವಿಚಾರಗಳನ್ನು ಕುರಿತು ಚಿಂತಿಸಿ, ಅವುಗಳಿಲ್ಲವೆಂದು ಪ್ರಚಾರಪಡಿಸುವ ಪ್ರಯತ್ನಗಳು ನಡೆಯಬೇಕಾಗಿದೆ. ಇಲ್ಲದಿದ್ದರೆ ಧರ್ಮದ ಹೆಸರಿನಲ್ಲಿ ಶೋಷಣೆ ನಿರಂತರ. ಧರ್ಮವೆಂದರೆ ಶೋಷಣೆ ಅಲ್ಲ ; ಶೋಷಣೆಯಿಂದ ಸಮಾಜವನ್ನು ಹೊರತರಲು ನಾವೀಗ ಪ್ರಯತ್ನವನ್ನು ಆರಂಭಿಸಬೇಕಾಗಿದೆ. ಹೀಗೆ ಅರಿವು ಮೂಡುತ್ತಲೇ ಕೋಟಿಗಟ್ಟಲೆ ಮುಗ್ಧರಿಗೆ ಶೋಷಣೆಯಿಂದ ಮುಕ್ತಿ ಸಿಗುತ್ತದೆ.

ಧರ್ಮದಲ್ಲಿ ಪ್ರಜಾಪ್ರಭುತ್ವದ ಆಶಯಗಳಿಗೆ ಅವಕಾಶವಿರಬೇಕು. ಧರ್ಮವಿಂದು ಪ್ರಜಾಪ್ರಭುತ್ವದ ನೆಲೆಯಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾಗುತ್ತದೆ. ಪ್ರಜಾಪ್ರಭುತ್ವ ಸ್ತರದ ಮೇಲೆ ನಿಲ್ಲದ ಧರ್ಮವು " ಕರ್ಮಠತನ" ಆಗುವ ಸಾಧ್ಯತೆಯೇ ಅಧಿಕ. ಧರ್ಮವೆಂದರೆ ಒಂದು ಮುಕ್ತ ಸ್ಥಿತಿ, ಒಂದು ಮುಕ್ತ ವಿಚಾರವೇದಿಕೆಯೆಂಬ ಭಾವ ಬಲಿಯಬೇಕಾಗಿದೆ. ಪ್ರಜಾಪ್ರಭುತ್ವದ ಆಶಯವೇ ಒಂದು ಸ್ವತಂತ್ರ ವಿಚಾರವಾದ. ಒಬ್ಬ ವ್ಯಕ್ತಿ ಇಷ್ಟಪಟ್ಟರೆ ತಾನು ಸ್ವತಂತ್ರವಾಗಿ ಆಲೋಚಿಸುವ ಅವಕಾಶವನ್ನು ಧರ್ಮವು ನೀಡಬೇಕಾಗುತ್ತದೆ. ಧರ್ಮದಲ್ಲಿ ಮುದ್ರಿಸಲ್ಪಟ್ಟ ವಿಚಾರವೇ ಅಂತಿಮವಲ್ಲ; ಹೊಸ ವಿಚಾರಗಳಿಗೂ ಅವಕಾಶಮಾಡಿಕೊಟ್ಟಾಗ, ಆ ಧರ್ಮ ಹೆಚ್ಚು ಸಮಕಾಲೀನ ಆಗುತ್ತದೆ. ಸಮಕಾಲೀನವಲ್ಲದ ಧರ್ಮವು ಯುಗಧರ್ಮವಾಗಲು ಸಾಧ್ಯವಿಲ್ಲ. ಸಮಕಾಲೀನ ಸಂಘರ್ಷಗಳಿಗೆ ಅವಕಾಶ ಮಾಡಿಕೊಡುವುದರ ಮೂಲಕ ಒಂದು ಧರ್ಮ ತಾನು ಸಮಕಾಲೀನವೆಂಬುದನ್ನು ತೋರಿಸಿಕೊಡಬೇಕಾಗುತ್ತದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಸಂಘರ್ಷ ಅನಿವಾರ್ಯ. ಯಾವುದೇ ಒಬ್ಬ ವ್ಯಕ್ತಿ ತಾನು ಯಾವುದೇ ತತ್ವ ಅಥವಾ ಸಿದ್ಧಾಂತವನ್ನು ಅನುಸರಿಸುವ, ಚಿಂತನೆ ನಡೆಸುವ ಸ್ವಾತಂತ್ರ್ಯವನ್ನು ಧರ್ಮವು ನೀಡಬೇಕಾಗುತ್ತದೆ. ಸ್ವಾತಂತ್ರ್ಯ ಪ್ರತಿಯೊಬ್ಬರ ಪರಮಾಧಿಕಾರ. ಧರ್ಮವು ಯಾರೊಬ್ಬರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಬಾರದು. ಬದಲಾಗಿ ಸ್ವಾತಂತ್ರ್ಯವಿಲ್ಲದವರಿಗೆ ಅದನ್ನು ಕೊಡಿಸಲು ಅದು ಹೋರಾಡಬೇಕಾಗುತ್ತದೆ. ಸ್ವಾತಂತ್ರ್ಯಕ್ಕೆ ಮಹತ್ವ ನೀಡದ ಧರ್ಮವು ಕಾಲಗತಿಯಲ್ಲಿ ಸತ್ತು ಹೋಗುತ್ತದೆ. ಪ್ರಜಾಪ್ರಭುತ್ವದ ಲಕ್ಷಣವಾದ ಸ್ವಾತಂತ್ರ್ಯ ತತ್ವವು ಧರ್ಮದ ಕಕ್ಷೆಯಲ್ಲಿ ಹೆಚ್ಚುಹೆಚ್ಚು ಚಿಂತನೆ ಆಗುವುದು ಮುಖ್ಯ. ಸ್ವಾತಂತ್ರ್ಯದ ಮತ್ತೊಂದು ತತ್ವವೇ ಸಮಾನತೆ. ಧರ್ಮವು ಈ ಅಂಶವನ್ನು ಸ್ವೀಕರಿಸಿಕೊಂಡು ಎಲ್ಲರನ್ನೂ ಸಮಾನ ದೃಷ್ಟಿಕೋನದಿಂದ ನೋಡಬೇಕು. ಅಲ್ಲಿ ಜಾತಿ, ವರ್ಣ, ವರ್ಗ, ವಯಸ್ಸು ಮತ್ತು ಲಿಂಗ ಭೇದಕ್ಕೆ ಅವಕಾಶ ಇರಬಾರದು. ಯಾವುದೇ ಒಬ್ಬ ವ್ಯಕ್ತಿಗೆ ಯಾವ ಆತಂಕವಿಲ್ಲದೇ ಧರ್ಮವನ್ನು

ಅನುಭವಿಸುವ, ಆಚರಿಸುವ ಮುಕ್ತ ವಾತಾವರಣ ನಿರ್ಮಾಣವಾಗಬೇಕಾಗಿದೆ. ಮಾನವ ಮಾನವರ ನಡುವಿನ ಅಂತರ ನಿವಾರಣೆಯಾದರೆ ಜನಾಂಗೀಯ ಕಲಹಗಳು ನಿಲ್ಲುತ್ತವೆ. ಅಸಮಾನತೆ ಇರುವವರೆಗೂ ಜನಾಂಗೀಯ ಕಲಹಗಳು ನಡೆಯುತ್ತಿರುತ್ತವೆ. ಅಸಮಾನತೆ ನಿವಾರಣೆ ಆದ ದಿನದಂದೇ ಜನಾಂಗೀಯ ಕಲಹಗಳು ನಿಲ್ಲುತ್ತವೆ. ತನ್ಮೂಲಕ ಒಬ್ಬ ಶೂದ್ರ, ಅಲಕ್ಷಿತ ಅಥವಾ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಅವಕಾಶ ಸಿಗಬೇಕು. ಅವನನ್ನೇ ಕೇಂದ್ರೀಕರಿಸಿಕೊಂಡೆ ಧರ್ಮಗಳು ಕೆಲಸ ಮಾಡಬೇಕಾಗುತ್ತದೆ.

ಹನ್ನೆರಡನೇ ಶತಮಾನದಲ್ಲಿ ಇಂಥದ್ದೊಂದು ಪ್ರಯೋಗ ನಡೆದಿರುವುದನ್ನು ಇಲ್ಲಿ ಸ್ಮರಿಸಬಹುದು. ಒಬ್ಬ ನೀಗ್ರೋ ಜನಾಂಗಕ್ಕೆ ಸೇರಿದ ವ್ಯಕ್ತಿಯೊಬ್ಬ ಒಂದು ಚರ್ಚ್‌ಗೆ ಬರುವಂತಾಗಬೇಕೆಂದು ಭಾವಿಸುವ ಇಂದಿನ ದಿನಮಾನಗಳಲ್ಲಿ ಎಂಟುನೂರ ಐವತ್ತು ವರ್ಷಗಳ ಹಿಂದೆಯೇ ಬಸವಣ್ಣನವರು ಅನುಭವ ಮಂಟಪವೆಂಬ ಪ್ರಥಮ ಧಾರ್ಮಿಕ ಸಂಸತ್ ನಿರ್ಮಿಸಿರುವುದು ಒಂದು ಮಹತ್ತರವಾದ ಸಾಧನೆ. ಏಕೆಂದರೆ, ಅಂದಿನ ದಿನಮಾನಗಳಲ್ಲಿ ಧರ್ಮದ ಆಚಾರ ವಿಚಾರಗಳು ಬಹು ಜಟಿಲವಾಗಿದ್ದವು. ಹಿಂದುಳಿದವರೊಂದಿಗೆ ಸಹ ಭೋಜನ ಮಾಡುವುದಿರಲಿ, ಅವರು ರಸ್ತೆಯಲ್ಲಿ ನಡೆಯುವಂತಿರಲಿಲ್ಲ; ಧರ್ಮಶ್ರವಣ ಮಾಡುವಂತಿರಲಿಲ್ಲ. ಅಂಥ ಕಾಲವದು. ಆಗಿನ ದಿನಗಳಲ್ಲೇ ಬಸವಣ್ಣನವರು, ಮಾದಾರ ಚೆನ್ನಯ್ಯನವರನ್ನು, ದೋಹರ ಕಕ್ಕಯ್ಯನವರನ್ನು ಗೌರವಿಸಿದ್ದಾರೆ. ಇವರ ದಾಸ-ದಾಸಿಯರು ಬೆರಣಿಗೆ ಹೋದಾಗ ಕೂಡಿದರು. ಇಂಥವರಿಗೆ ಹುಟ್ಟಿದವ ನಾನೆಂದು ಸಮರ್ಥಿಸಿಕೊಳ್ಳುತ್ತಾರೆ. ಎಲ್ಲ ವರ್ಗದವರಿಗೂ ಮಾತ್ರವಲ್ಲ ಸ್ತ್ರೀಯರಿಗೂ ಅಲ್ಲಿ ಪ್ರವೇಶವನ್ನು ಕೊಡಿಸುತ್ತಾರೆ. ಸೂಳೆ ಸಂಕವ್ವೆ ಎಂಬ, ವಚನಕಾರ್ತಿ ಅನುಭವ ಮಂಟಪದಲ್ಲಿ ವಚನ ರಚಿಸಿದ ಉದಾಹರಣೆ ಇದೆ. ಹೆಂಡದ ಮಾರಯ್ಯನೆಂಬ ವ್ಯಕ್ತಿ ತಾನು ಶರಣನಾಗಿ ಸಾತ್ವಿಕ ಜೀವನ ನಡೆಸಿದ. ಎಲ್ಲಕ್ಕಿಂತ ಮುಖ್ಯವಾಗಿ ಬಸವಣ್ಣನವರು ಶೂನ್ಯಪೀಠವೊಂದನ್ನು ರಚಿಸಿ, ಅದಕ್ಕೆ ಅಲ್ಲಮ ಪ್ರಭುವನ್ನು ಅಧ್ಯಕ್ಷರನ್ನಾಗಿ ಮಾಡುತ್ತಾರೆ. ಇಷ್ಟೇ ಅಲ್ಲದೆ ಹರಳಯ್ಯ ಮತ್ತು ಮಧುವಯ್ಯರ ಮಕ್ಕಳ ಅಂತರ್ಜಾತಿ ಮದುವೆ ಮಾಡಿಸಿ ಜಾತಿನಿರ್ಮೂಲನಕ್ಕಾಗಿ ಹೋರಾಡಿದ್ದಾರೆ.

ಮುಂದೆ ವರ್ಣಸಂಕರವಾಗಿ, ಬಿಜ್ಜಳನು ಹರಳಯ್ಯ ಮಧುವಯ್ಯ ಮತ್ತವರ ಮಕ್ಕಳಿಗೆ ಎಳೆಹೂಟೆ ಶಿಕ್ಷೆಯನ್ನು ವಿಧಿಸಿ, ಚಿತ್ರಹಿಂಸೆಯನ್ನು ಕೊಟ್ಟು ಸಾಯಿಸುತ್ತಾನೆ. ಶರಣರ ಮೇಲೆ ಎಲ್ಲೆಂದರಲ್ಲಿ ದೌರ್ಜನ್ಯ, ಕಗ್ಗೊಲೆ ನಡೆಯುತ್ತದೆ. ಬಸವಣ್ಣನವರು ಗಡೀಪಾರು ಶಿಕ್ಷೆಗೆ ಒಳಗಾಗುತ್ತಾರೆ.

ಬಸವಕ್ರಾಂತಿಯು ಪ್ರಜಾಪ್ರಭುತ್ವದ ನೆಲೆಯ ಮೇಲೆ ನಡೆದಿದೆ. ಪ್ರಜಾಪ್ರಭುತ್ವವು ಜನರಿಗೆ ಬೇಗ ಅರ್ಥವಾಗುತ್ತದೆ. ಏಕೆಂದರೆ ಅದು ಪ್ರಜೆಗಳಿಗೆ ಬಹಳ ಹತ್ತಿರದಲ್ಲಿದೆ. ವಾಕ್‌ಸ್ವಾತಂತ್ರ್ಯ, ಬರೆಯುವ ಸ್ವಾತಂತ್ರ್ಯ, ಬದುಕುವ ಸ್ವಾತಂತ್ರ್ಯ ಎಲ್ಲ ಸ್ವಾತಂತ್ರ್ಯಗಳನ್ನೂ ಅದು ನೀಡುತ್ತದೆ. ಕಾರಣ ಧರ್ಮಗಳು ಕ್ರಮೇಣವಾದರೂ ಪ್ರಜಾಪ್ರಭುತ್ವದ ಕಡೆಗೆ ಸಾಗಿದರೆ ಹೆಚ್ಚು ಪ್ರಸ್ತುತ ಆಗುತ್ತದೆ. (ಸಾಭಾರ : ಸಂವಾದ ಪತ್ರಿಕೆ)

ಫಾರಂ.೪ (ರೂಲ್-೮)

ಪ್ರಕಟಣೆಯ ಸ್ಥಳ	ಮೇಲುಕೋಟೆ
ಪ್ರಕಟಣೆಯ ಅವಧಿ	ಮಾಹೆಯಾನ
ಮುದ್ರಕರ ಹೆಸರು	ಬಾಲಕೃಷ್ಣ
ಭಾರತದ ಪ್ರಜೆಯೆ	ಹೌದು
ವಿಳಾಸ	ಇಂದೀವರ ಪ್ರಿಂಟರ್ಸ್ ಸಂತೇ ಬೀದಿ, ನಾಗಮಂಗಲ
ಪ್ರಕಾಶಕರ ಹೆಸರು	ಸುರೇಂದ್ರ ಕೌಲಗಿ
ಭಾರತದ ಪ್ರಜೆಯೆ	ಹೌದು
ವಿಳಾಸ	ಜನಪದ ಸೇವಾ ಟ್ರಸ್ಟ್ ಕಲ್ಯಾಣಿ ಬೀದಿ, ಮೇಲುಕೋಟೆ-೫೭೧೪೩೧ ಮಂಡ್ಯ ಜಿಲ್ಲಾ.
ಸಂಪಾದಕರ ಹೆಸರು	ಸುರೇಂದ್ರ ಕೌಲಗಿ
ಭಾರತದ ಪ್ರಜೆಯೆ	ಹೌದು
ವಿಳಾಸ	ಜನಪದ ಸೇವಾ ಟ್ರಸ್ಟ್ ಕಲ್ಯಾಣಿ ಬೀದಿ, ಮೇಲುಕೋಟೆ-೫೭೧೪೩೧ ಮಂಡ್ಯ ಜಿಲ್ಲಾ.
ಮಾಲೀಕರ ಹೆಸರು ಮತ್ತು ವಿಳಾಸ	ಜನಪದ ಸೇವಾ ಟ್ರಸ್ಟ್ ಕಲ್ಯಾಣಿ ಬೀದಿ, ಮೇಲುಕೋಟೆ-೫೭೧೪೩೧ ಮಂಡ್ಯ ಜಿಲ್ಲಾ.

ಈ ಕೆಳಗೆ ರುಜು ಮಾಡಿರುವ ಸುರೇಂದ್ರ ಕೌಲಗಿ ಆದ ನಾನು ಮೇಲೆ ತಿಳಿಸಲಾದ ವಿವರಗಳು ನಮಗೆ ತಿಳಿದ ಮಟ್ಟಿಗೆ ಸತ್ಯ.

ದಿನಾಂಕ :೨೮-೦೨-೨೦೦೫ ಸುರೇಂದ್ರ ಕೌಲಗಿ
ಸ್ಥಳ : ಮೇಲುಕೋಟೆ (ಪ್ರಕಾಶಕರ ರುಜು)

ಸಂತಾಪ

ಕರ್ನಾಟಕದಲ್ಲಿ ಸುಭಾಷ್ ಚಂದ್ರ ಬೋಸ್‌ರ ನೆನಪನ್ನು ಹಸಿರಾಗಿಟ್ಟಿದ್ದ, ಶಿಸ್ತಿನ ಸಿಪಾಯಿಯಾಗಿದ್ದ ಐ.ಎನ್.ಎ. ರಾಮರಾವ್ ಅವರ ನಿಧನಕ್ಕಾಗಿ ಜನಪದ ವಿಚಾರವು ತನ್ನ ಅಂತಃಕರಣಪೂರಿತ ಸಂತಾಪವನ್ನು ವ್ಯಕ್ತಪಡಿಸುತ್ತದೆ ಮತ್ತು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

ವಾಚಕ ಮಿತ್ರರಲ್ಲಿ ವಿನಂತಿ.

ಜನಪದ ವಿಚಾರ ಪ್ರಸ್ತುತ ವಿಷಯಗಳಿಗೆ ಸಂಬಂಧಿಸಿದಂತೆ ಲೇಖನಗಳನ್ನು ಆಹ್ವಾನಿಸುತ್ತದೆ. ಆಸಕ್ತರು ಪತ್ರಿಕೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

ತಾವು ದಯಮಾಡಿ ಜನಪದ ವಿಚಾರದ ವಾರ್ಷಿಕ ಚಂದಾ 100/– ರೂ. ಮನಿಆರ್ಡರ್ ಮೂಲಕವಾಗಲೀ ಚಕ್ ಮೂಲಕವಾಗಲೀ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

–ಪ್ರಕಾಶಕರು

KA-SKMND-470-2003-05
Regd. no. KAR/KAN/2000/3820

ತೆರೆದ-ಅಂಚೆ

TO,

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ® . Melkote. Dist- mandya – 571431
Phone : 08236 – 298754 e-mail : janapada@yahoo.com